ಬೆಲೆ ರೂ.2.50
D.O.P - 15th of every month at Udupi Sorting Office


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ಫೆಬ್ರವರಿ 2018

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-18 ಸಂಚಿಕೆ-2 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ : ಬೆಳ್ತಂಗಡಿ ತಂಡಕ್ಕೆ ಪ್ರಶಸ್ತಿ





ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಉಡುಪಿ ಇದರ ಆಶ್ರಯದಲ್ಲಿ ಯುವ ವಿಭಾಗದ ನೇತೃತ್ವದಲ್ಲಿ 26ನೇ ವರ್ಷದ "ಶ್ರೀ ಶಾರದಾ ಟ್ರೋಫಿ" ಕ್ರಿಕೆಟ್ ಪಂದ್ಯಾಟವು ದಿನಾಂಕ 21–01–2018ನೇ ಆದಿತ್ಯವಾರ ಎಮ್.ಜಿ.ಎಮ್. ಕಾಲೇಜಿನ ಎ.ಎಲ್.ಎನ್ ರಾವ್ ಕ್ರೀಡಾಂಗಣದಲ್ಲಿ ಯಶಸ್ವಿಯಾಗಿ ಜರಗಿತು.

ಆ ದಿನ ಬೆಳಗ್ಗೆ ನಮ್ಮ ಸಮಾಜದ ಹಿರಿಯರಾದ ಹಾಗೂ ಮಾತೃ ಸಂಘದ ಸಲಹೆಗಾರರಾದ ಶ್ರೀ ಬೆಳ್ಮಣ್ಣು ವಾಸುದೇವ ರಾಯರು ಪಂದ್ಯಾಕೂಟವನ್ನು ಪಾರಿವಾಳ ವನ್ನು ಹಾಗೂ ಬಲೂನುಗಳನ್ನು ಹಾರಿಸುವ ಮೂಲಕ ಉದ್ಘಾಟಿಸಿ ಪಂದ್ಯಾಕೂಟಕ್ಕೆ ಶುಭವನ್ನು ಹಾರೈಸಿದರು. ಸಂಘದ ಅಧ್ಯಕ್ಷರಾದ ಶ್ರೀ ವೈ.ಭುವನೇಂದ್ರ ರಾವ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀ ಕೆ. ಸುರೇಶ ರಾವ್, ಕೋಶಾಧಿಕಾರಿ ಶ್ರೀ ಕೆ. ಸುಧಾಕರ ರಾವ್, ಉಪಾಧ್ಯಕ್ಷರಾದ ಶ್ರೀ ಎಸ್.ಎಮ್. ರಾವ್, ಸಲಹೆಗಾರರಾದ ಶ್ರೀ ಸಿ.ಎಸ್.ರಾವ್, ಪಂದ್ಯಾಕೂಟದ ಸಂಯೋಜಕರಾದ ಶ್ರೀ ವಸಂತ ರಾವ್ ಕರಂಬಳ್ಳಿ ಹಾಗೂ ಶ್ರೀ ಕೃಷ್ಣಾನಂದ ರಾವ್ ಉಂಡಾರು ಉಪಸ್ಥಿತರಿದ್ದರು. ಶ್ರೀ ಸುಧಾಕರ ರಾವ್ ಸ್ವಾಗತಿಸಿ, ಶ್ರೀ ಹೆರ್ಗ ನಿರಂಜನ ರಾವ್‌ರವರು ಕಾರ್ಯಕ್ರಮ ನಿರ್ವಹಿಸಿ ವಂದಿಸಿದರು.

ಈ ಬಾರಿಯ ಪಂದ್ಯಾಕೂಟದಲ್ಲಿ ವಿವಿಧೆಡೆಗಳಿಂದ ಬಂದ 11 ತಂಡಗಳು ಭಾಗವಹಿಸಿದ್ದವು. ಮಧ್ಯಾಹ್ನ ಭೋಜನದ ಮೊದಲು ಮೊದಲ ಹಂತದ ಸ್ಪರ್ಧೆಗಳನ್ನು ಮುಗಿಸಿ ಭೋಜನದ ನಂತರ ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳು ನಡೆದವು. ಸೆಮಿಫೈನಲ್‌ನಲ್ಲಿ ಬೆಳ್ತಂಗಡಿ ತಂಡವು ಎಫ್.ಡಬ್ಲ್ಯೂ.ಎಫ್. ಬೆಂಗಳೂರು ತಂಡವನ್ನು ಮತ್ತು ಸುರತ್ಕಲ್ ತಂಡವು ಜ್ಞಾನಶಕ್ತಿ ಬೆಂಗಳೂರು ತಂಡವನ್ನು ಸೋಲಿಸಿ ಫೈನಲ್ ತಲುಪಿದವು. ಫೈನಲ್‌ನಲ್ಲಿ ಬೆಳ್ತಂಗಡಿ ತಂಡವು ಸುರತ್ಕಲ್ ತಂಡವನ್ನು ಸೋಲಿಸಿ "ಶ್ರೀ ಶಾರದಾ ಟ್ರೋಫಿ"ಯನ್ನು ತನ್ನದಾಗಿಸಿಕೊಂಡಿತು. ಅತ್ಯುತ್ತಮ ಬೌಲರ್ ಆಗಿ ಆದಿತ್ಯ ಶ್ಯಾನುಭಾಗ್ ಸುರತ್ಕಲ್, ಅತ್ಯುತ್ತಮ ಬ್ಯಾಟ್ಸ್‌ಮನ್ ಆಗಿ ಆದಿತ್ಯ ಸುರತ್ಕಲ್ ಹಾಗೂ ಅತ್ಯುತ್ತಮ ಆಲ್‌ರೌಂಡರ್ ಆಗಿ ಸುದರ್ಶನ್ ಬೆಳ್ತಂಗಡಿ ಇವರು ಮೂಡಿಬಂದರು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಪಾವಂಜೆಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ಮುಕ್ತೇಸರರಾದ ಶ್ರೀ ಶಶೀಂದ್ರ ಕುಮಾರ್ ಮುಖ್ಯ ಅತಿಥಿಯಾಗಿ ಆಗಮಿಸಿ ಯುವ ಜನರು ಮೊಬೈಲ್‌ನ ಹಿಂದೆ ಹೆಚ್ಚಾಗಿ ಬೀಳದೆ ಇಂತಹ ಕ್ರೀಡೆಗಳಲ್ಲಿ ಹೆಚ್ಚಾಗಿ ಭಾಗವಹಿಸಿ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದೆಂದು ಹೇಳಿದರು. ಶ್ರೀ ವೈ.ಭುವನೇಂದ್ರ ರಾವ್ ಅಧ್ಯಕ್ಷತೆ ವಹಿಸಿದ ಕಾರ್ಯಕ್ರಮದಲ್ಲಿ ಶ್ರೀ ಕೆ. ಸುರೇಶ ರಾವ್, ಶ್ರೀ ಕೆ. ಸುಧಾಕರ ರಾವ್, ಶ್ರೀ ಸಿ.ಎಸ್.ರಾವ್, ಶ್ರೀ ಜಯರಾಮ ರಾವ್, ಶ್ರೀ ವಸಂತ ರಾವ್ ಕರಂಬಳ್ಳಿ, ಶ್ರೀ ಕೃಷ್ಣಾನಂದ ರಾವ್ ಉಂಡಾರು ಉಪಸ್ಥಿತರಿದ್ದರು. ಶ್ರೀ ಹೆರ್ಗ ನಿರಂಜನ ರಾವ್ ಸ್ವಾಗತಿಸಿ, ಶ್ರೀ ವಸಂತ ರಾವ್ ಕರಂಬಳ್ಳಿ ವಂದಿಸಿದರು. ಶ್ರೀ ಮಟ್ಟು ಕೃಷ್ಣಕುಮಾರ್ ರಾವ್ ಕಾರ್ಯಕ್ರಮ ನಿರೂಪಿಸಿದರು.

## ಮಹಿಳಾಕ್ರೀಡಾಕೂಟ



ತಾ.21–01–2018ರಂದು ಎಮ್.ಜಿ.ಎಮ್ ಗ್ರೌಂಡಿನಲ್ಲಿ ಶ್ರೀ ಶಾರದಾ ಕ್ರಿಕೆಟ್ ಟೂರ್ನಮೆಂಟ್ ನಡೆಯುತ್ತಿದ್ದಂತೆ ಇತ್ತ ಶ್ರೀ ಶಾರದಾ ಮಂಟಪದಲ್ಲಿ ಮಹಿಳೆಯರು ಹಾಗೂ ಮಕ್ಕಳಿಗಾಗಿ ರಾಜ್ಯಮಟ್ಟದ ಶಟಲ್ ಬ್ಯಾಡ್ಮಿಂಟನ್ ಕೂಟ ಹಾಗೂ ವಿವಿಧ ಆಟೋಟ ಸ್ಪರ್ಧೆಗಳು ನಡೆದವು. ಮೊತ್ತ ಮೊದಲ ಬಾರಿಗೆ ಶ್ರೀ ಶಾರದಾ ಮಂಟಪದಲ್ಲಿ ರಾಜ್ಯಮಟ್ಟದ ಶಟಲ್ ಬ್ಯಾಡ್ಮಿಂಟನ್ ಕೂಟವನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಯನ್ನು ಬೆಳ್ಮಣ್ ವಾಸುದೇವರಾಯರ ಪತ್ನಿ ಶ್ರೀಮತಿ ತುಳಸಿಯವರು ಸ್ಪರ್ಧಾಳುಗಳಿಗೆ ಬ್ಯಾಟುಗಳನ್ನು ವಿತರಿಸುವ ಮೂಲಕ ಉದ್ಘಾಟಿಸಿದರು. ಶ್ರೀ ಐ.ಕೆ. ಜಯಚಂದ್ರ ಬ್ಯಾಡ್ಮಿಂಟನ್ ಕೂಟವನ್ನು ಸುಲಲಿತವಾಗಿ ನಿರ್ವಹಿಸಿದರು. ಬ್ಯಾಡ್ಮಿಂಟನ್ ಆಟದಲ್ಲಿ ಬೆಂಗಳೂರಿನ ಶ್ರೀಮತಿ ಅರ್ಚನ ಮಹಿಳೆಯರ ವಿಭಾಗದಲ್ಲಿಯೂ ಮಂಗಳೂರಿನ ಶ್ರೀ ವಲ್ಲಭ ಮಕ್ಕಳ ವಿಭಾಗದಲ್ಲಿಯೂ ಪ್ರಥಮ ಸ್ಥಾನಿಗಳಾಗಿ ಮೂಡಿಬಂದರು. ಇತರ ಕ್ರೀಡೆಗಳಾದ ಚಾಕಲೇಟ್ ಹೆಕ್ಕುವುದು, ಬಲೂನ್ ಒಡೆಯುವುದು ಇತ್ಯಾದಿ ಸ್ಪರ್ಧೆಗಳಲ್ಲಿ ಎಲ್ಲರೂ ಉತ್ಸಾಹದಿಂದ ಭಾಗಿಗಳಾದರು. ಕೊನೆಯಲ್ಲಿ ಜರುಗಿದ ಮಹಿಳೆಯರ ಹಗ್ಗ ಜಗ್ಗಾಟ ಸ್ಪರ್ಧೆಯು ಈ

(3ನೇ ಪುಟಕ್ಕೆ..)

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.

### ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯ ಕರೆಯೋಲೆ



ಪ್ರಿಯರೇ,

ಸ್ವಸ್ತಿ! ಶ್ರೀ ಹೇಮಲಂಬಿ ನಾಮ ಸಂ।ರದ ಮೀನ ಸಂಕ್ರಮಣ ತಾ.14-03-2018ನೇ ಬುಧವಾರ

**ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯು**

ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಪುಣ್ಯ ಸಮಾರಂಭಕ್ಕೆ ತಾವೆಲ್ಲರೂ ಬಂದು, ಭಾಗವಹಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

-ಆಡಳಿತ ಮಂಡಳಿ

ಕಾರ್ಯಕ್ರಮ : ಬೆಳಿಗ್ಗೆ ಗಂಟೆ 8-00ರಿಂದ ಗಣಹೋಮ, ರುದ್ರಾಭಿಷೇಕ, ಶ್ರೀಚಕ್ರ ಪೂಜೆ, ಮಹಿಳಾ ವೇದಿಕೆಯಿಂದ ಭಜನಾ ಕಾರ್ಯಕ್ರಮ, ಪಾರಾಯಣ, ಮಧ್ಯಾಹ್ನ ಗಂಟೆ 12-00ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಬ್ರಾಹ್ಮಣ ಸುವಾಸಿನೀ ಆರಾಧನೆ ಮತ್ತು ಅನ್ನಸಂತರ್ಪಣೆ

ವಿ.ಸೂ. : ತಾ.18-03-2018ರಿಂದ 25-03-2018ರ ತನಕ ಕಿರುನವರಾತ್ರಿ ಪೂಜೆ, ತಾ.25-03-2018ರಂದು ಸಾಮೂಹಿಕ ದುರ್ಗಾನಮಸ್ಕಾರ ಪೂಜೆಯು ಇರುತ್ತದೆ. ವಿವರಗಳಿಗಾಗಿ 3ನೇ ಪುಟ ನೋಡಿ....

## ಸಂಪಾದಕೀಯ.....

– ಡಾ| ವೈ. ಸುದರ್ಶನ್ ರಾವ್

ಇತ್ತೀಚೆಗೆ ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮದರ್ಶಿಗಳು, ಖಾವಂದರು ಹಾಗೂ ಮಾತನಾಡುವ ದೇವರು ಎಂದೇ ಖ್ಯಾತರಾದ ಡಾ.ವೀರೇಂದ್ರ ಹೆಗ್ಗಡೆಯವರನ್ನು ಭೇಟಿಯಾಗಿ ಅವರ ಪೀಠಾರೋಹಣದ ಐವತ್ತನೇ ವರ್ಷದ ಸಂದರ್ಭದಲ್ಲಿ ಶುಭಹಾರೈಸಿ ಅವರ ಆಶೀರ್ವಾದ ಪಡೆದರು. ಈ ಹಿನ್ನೆಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೂ ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೂ ಇರುವ ಸಂಬಂಧಗಳ ಬಗ್ಗೆ ಈ ಲೇಖನ.

ತುಳುನಾಡಿನ ಇತಿಹಾಸದ ಸಂಶೋಧಕ ದಿವಂಗತ ಪಾದೂರು ಗುರುರಾಜಭಟ್ಟರ ತುಳುನಾಡು ಪುಸ್ತಕದಲ್ಲಿ “ಧರ್ಮಸ್ಥಳದ ಮೂಲಿವರ್ಗ ದುರ್ಮುಖಿಚಿಟ್ಟೆ ಪ್ರಕಾರದ ಸ್ಥಾನಿಕ ಲಿಂಗಯ್ಯನದ್ದು. ಇಲ್ಲಿ ಮಂಜುನಾಥೇಶ್ವರ ಹಿಂದೂ ದೇವಾಲಯ. ಇಲ್ಲಿಯ ಮುಕ್ತೇಸರರು ಜೈನ ಹೆಗ್ಗಡೆಯವರು. ಪೂಜೆಯು ಮಾಧ್ವ ಶಿವಳ್ಳಿಯವರ ಕೈಯಲ್ಲಿದೆ. ಈಗಲೂ ಧರ್ಮಸ್ಥಳದಲ್ಲಿ ದೇವಳಕ್ಕೆ ಸಂಬಂಧಿಸಿದ ನಾಲ್ಕು ಹೆಗ್ಗಡೆಗಳಿದ್ದಾರೆ. ಜೈನರಲ್ಲಿ ಒಬ್ಬರು (ಮುಖ್ಯ ಆಡಳಿತದಾರರು), ಸ್ಥಾನಿಕರಲ್ಲಿ ಒಬ್ಬರು, ಶಿವಳ್ಳಿಯವರಲ್ಲಿ ಒಬ್ಬರು ಮತ್ತು ಬಂಟರಲ್ಲಿ ಒಬ್ಬರು. ಅಲ್ಲಿಯ ಸ್ಥಾನಿಕ ಹೆಗ್ಗಡೆಯು ಜೈನ ಹೆಗ್ಗಡೆಯವರಂತೆ ರುಮಾಲು ಕಟ್ಟಬೇಕು. ಇವರಿಗೆ ದೇಲಂಪಾಡಿ ಎಂಬ ಹೆಸರಿದೆ. ಇವರು ಭಕ್ತರಿಂದ ಹಣ್ಣುಕಾಯಿ ತೆಗೆದುಕೊಂಡು ಅವರ ಹಾಲಾವಲೆಯನ್ನು ಮುಖ್ಯ ಜೈನ ಹೆಗ್ಗಡೆಯವರಿಗೆ ಹೇಳಿ, ಅವರ ತೀರ್ಪನ್ನು ಭಕ್ತರಿಗೆ ತಿಳಿಸಿ ಅವರಿಂದ ಕಾಣಿಕೆ ಹಾಕಿಸಿ ಪ್ರಸಾದವನ್ನು ಅರ್ಚಕರಿಂದ ತೆಗೆದುಕೊಂಡು ಬಂದು ಭಕ್ತರಿಗೆ ಒಳ್ಳೆಯದನ್ನು ಬಯಸುವುದು. ಇದರಿಂದ ತಿಳಿಯಬಹುದಾದ ವಿಷಯವೇನೆಂದರೆ ಧರ್ಮಸ್ಥಳವು ಒಂದು ಕಾಲದಲ್ಲಿ ಸ್ಥಾನಿಕರದೇ ಆಗಿತ್ತೆಂಬುದು, ಇಲ್ಲಿಯ ಸ್ಥಳವಂದಿಗರು ಪುತ್ತೂರು ನಟ್ಟೋಜ ಮನೆತನದವರಾಗಿರಬೇಕು...”

ಇವು 1963ನೇ ಇಸವಿಯಲ್ಲಿ ಪ್ರಕಟಗೊಂಡ ತುಳುನಾಡು ಎಂಬ ಪುಸ್ತಕದಲ್ಲಿ ಡಾ. ಪಾದೂರು ಗುರುರಾಜಭಟ್ಟರು ಬರೆದಿರುವ ಕೆಲವು ಸಾಲುಗಳು. ಪ್ರಸಕ್ತ ಶ್ರೀ ಭಾಸ್ಕರ ರಾವ್ ಇವರು ದೇಲಂಪಾಡಿತ್ತಾಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರಿಂದ ತಿಳಿಯುವುದೇನೆಂದರೆ ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಸ್ವಾಮಿ ದೇಗುಲ ಸ್ಥಾಪನೆಯಾದ ಕಾಲದಿಂದಲೂ ನಂತರ ಇತಿಹಾಸದ ಹಲವಾರು ಸಂದಿಗ್ಧ ಕಾಲಘಟ್ಟಗಳಲ್ಲಿಯೂ ಸತತವಾಗಿ ಸ್ಥಾನಿಕ ಸಮಾಜ ಬಾಂಧವರು ಶ್ರೀಕ್ಷೇತ್ರದ ಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ಶ್ರೀ ವೀರೇಂದ್ರ ಹೆಗ್ಗಡೆಯವರು ಧರ್ಮದರ್ಶಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ಶ್ರೀ ಕ್ಷೇತ್ರವು ಕೇವಲ ಧಾರ್ಮಿಕ ಕ್ಷೇತ್ರ ಮಾತ್ರವಾಗಿರದೆ ಭಕ್ತರ ಶೈಕ್ಷಣಿಕ, ಆರೋಗ್ಯದ, ಆರ್ಥಿಕ , ಸಾಮಾಜಿಕ ಅಭಿವೃದ್ಧಿಗಾಗಿಯೂ ತನ್ನ ಸಹಾಯಹಸ್ತ ಚಾಚಿದೆ. ಶ್ರೀ ಹೆಗ್ಗಡೆಯವರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಂತಹ ವಿಶ್ವಪ್ರಸಿದ್ಧ ಯೋಜನೆಗಳು ಲಕ್ಷಾಂತರ ಕುಟುಂಬಗಳ ಬಾಳಿನ ಪಥವನ್ನು ಹಳಿಗೆ ತಂದು ನಿಲ್ಲಿಸಿವೆ.

2007ರಲ್ಲಿ ಉಡುಪಿಯಲ್ಲಿ ನಡೆದ ಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ ಶ್ರೀ ವೀರೇಂದ್ರ ಹೆಗ್ಗಡೆಯವರು ಮುಖ್ಯ ಅತಿಥಿಯಾಗಿ ಆಗಮಿಸಿ ಸ್ಥಾನಿಕರ ಬಗ್ಗೆ ತನ್ನ ಭಾವನೆಗಳನ್ನು ವ್ಯಕ್ತಪಡಿಸಿ ಸ್ಥಾನಿಕರ ಬುದ್ಧಿಮತ್ತೆ ಕರ್ತವ್ಯನಿಷ್ಠೆ ವಿಶ್ವಾಸಾರ್ಹತೆಗಳನ್ನು ಹೊಗಳಿದ್ದರು. ಸ್ಥಾನಿಕ ಸಮಾಜದ ಹಲವಾರು ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಹೆಗ್ಗಡೆಯವರು ಧನಸಹಾಯದೊಂದಿಗೆ ನೀಡಿದ ಆಶೀರ್ವಾದವನ್ನೂ ಇಲ್ಲಿ ಉಲ್ಲೇಖಿಸದಿರಲಾಗದು. ಉಭಯ ಜಿಲ್ಲೆಗಳಲ್ಲಿ ಪಿಡುಗಾಗಿದ್ದ ಶಿವಳ್ಳಿ ಸ್ಥಾನಿಕರ ನಡುವಿನ ಅಸಮಾನತೆಯ ಆಚರಣೆಗಳು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿಯೂ ಇದ್ದದ್ದೂ ಶ್ರೀ ಹೆಗ್ಗಡೆಯವರ ಗಮನಕ್ಕೆ ಬಂದ ತಕ್ಷಣ ಅದರ ನಿವಾರಣೆಗೆ ಕ್ರಮ ಕೈಗೊಂಡದ್ದು ಅವರಿಗೆ ನಮ್ಮ ಸಮಾಜದ ಮೇಲಿದ್ದ ಗೌರವದ ಸೂಚನೆ. ಶ್ರೀ ಹೆಗ್ಗಡೆಯವರ ಹಲವಾರು ಸಮಾಜಮುಖೀ ಕಾರ್ಯಕ್ರಮಗಳ ಪ್ರಯೋಜನವನ್ನು ನಮ್ಮ ಸಮಾಜದ ಸಾವಿರಾರು ಜನರು ವೈಯುಕ್ತಿಕವಾಗಿ ಪಡೆದಿದ್ದಾರೆ.


### ಸಂಪಾದಕ ಮಂಡಳಿ

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ


ಶ್ರೀ ಹೆಗ್ಗಡೆಯವರನ್ನು ಅವರ ಪೀಠಾರೋಹಣದ ಐವತ್ತನೇ ವರ್ಷದ ಸಂದರ್ಭದಲ್ಲಿ ನಮ್ಮವರು ಹೋಗಿ ಭೇಟಿಯಾಗಿ ಸ್ಥಾನಿಕ ಸಮಾಜದ ಅಭಿವಂದನೆಯನ್ನು ತಿಳಿಸಿರುವುದಿಂದ ಶ್ರೀ ಕ್ಷೇತ್ರದೊಂದಿಗೆ ನಮ್ಮ ಸಮಾಜವು ಹೊಂದಿರುವ ಸಂಬಂಧವನ್ನು ಜ್ಞಾಪಿಸಿಕೊಂಡಂತಾಯಿತು. ನಮ್ಮ ಗೌರವವೂ ಇಮ್ಮಡಿಯಾಯಿತು. ಇನ್ನು ಮುಂದೆಯೂ ನಮ್ಮ ಸಮಾಜಬಾಂಧವರು ಶ್ರೀ ಕ್ಷೇತ್ರಕ್ಕೆ ಭೇಟಿಯಿತ್ತಾಗಲೆಲ್ಲ ಶ್ರೀ ಹೆಗ್ಗಡೆಯವರನ್ನು ಸಾಧ್ಯವಿದ್ದಾಗ ಭೇಟಿಯಾಗಿ ತಮ್ಮ ಪರಿಚಯವನ್ನು ತಿಳಿಸಿ ಬಂದಲ್ಲಿ ಅವರಿಗೆ ಸ್ಥಾನಿಕ ಸಮಾಜದ ಮೇಲಿನ ಅಭಿಮಾನ ಇನ್ನಷ್ಟು ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ. ಶ್ರೀ ಮಂಜುನಾಥಸ್ವಾಮಿಯ ಹಾಗೂ ಶ್ರೀ ಹೆಗ್ಗಡೆಯವರ ಅನುಗ್ರಹ ಹಾಗೂ ಆಶೀರ್ವಾದಗಳು ಸದಾ ನಮ್ಮ ಸಮಾಜಕ್ಕೆ ಇರಲಿ ಎಂದು ಪ್ರಾರ್ಥಿಸುತ್ತಾ ಈ ಕಾರ್ಯಕ್ರಮದ ಸಂಘಟಕರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.


### ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12% |
| ಹಳೆಯ ವಾಹನ | : | 13.5% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010-11 ರಿಂದ 2015-16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)


### ಶ್ರೀಶಾರದಾ ಕ್ರಿಕೆಟ್ ಹಾಗೂ ಮಹಿಳಾ ಕ್ರೀಡಾಕೂಟದ ಪ್ರಾಯೋಜಕರು

**ಅಲೆವೂರು ಶಾಮರಾವ್** : ಸಿಂಡಿಕೇಟ್ ಬ್ಯಾಂಕಿನ ಅಧಿಕಾರಿಗಳಾದ ಶ್ರೀ ಅಲೆವೂರು ಶಾಮರಾಯರು ತಮ್ಮ ಮಾತಾಪಿತರಾದ ಶ್ರೀ ಭುಜಂಗರಾವ್ ಹಾಗೂ ಶ್ರೀಮತಿ ಶಾಂತಾರವರ ಸ್ಮರಣಾರ್ಥ ಹತ್ತು ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿತ್ತು ಶ್ರೀಶಾರದಾ ಕಪ್‌ನ ಪ್ರಥಮ ಬಹುಮಾನವನ್ನು ಪ್ರಾಯೋಜಿಸಿದ್ದಾರೆ.



**ಶ್ರೀ ಸಿ.ಎಸ್.ರಾವ್**: ಕಾರ್ಪೋರೇಶನ್ ಬ್ಯಾಂಕಿನ ನಿವೃತ್ತ ಡಿ.ಜಿ.ಎಂ ಹಾಗೂ ನಮ್ಮ ಸಂಘದ ಸಲಹೆಗಾರರಾದ ಚಿಟ್ಪಾಡಿ ಸರ್ವೋತ್ತಮರಾಯರು ಆರು ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿತ್ತು ಶ್ರೀ ಶಾರದಾ ಕಪ್‌ನ ದ್ವಿತೀಯ ಬಹುಮಾನವನ್ನು ಪ್ರಾಯೋಜಿಸಿದ್ದಾರೆ.



**ಶ್ರೀ ವೈ. ಭುವನೇಂದ್ರರಾವ್**: ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ವೈ.ಭುವನೇಂದ್ರರಾವ್ ಇವರು ತಮ್ಮ ಮಾತಾಪಿತರಾದ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕ ಹಾಗೂ ಗಿರಿಜಮ್ಮನವರ ಸ್ಮರಣಾರ್ಥ ನಾಲ್ಕು ಸಾವಿರ ರೂಪಾಯಿ ದೇಣಿಗೆಯಾಗಿತ್ತು ತೃತೀಯ ಹಾಗೂ ಚತುರ್ಥ ಬಹುಮಾನಗಳನ್ನು ಪ್ರಾಯೋಜಿಸಿದ್ದಾರೆ.



**ಶ್ರೀ ಬಜೆ ಜಯರಾಮ ರಾವ್** : ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಉದ್ಯೋಗಿ, ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರು, ನಮ್ಮ ಸಂಘ ಹಾಗೂ ಶ್ರೀ ಶಾರದಾ ಸೊಸೈಟಿಯ ನಿರ್ದೇಶಕರಾದ ಶ್ರೀ ಬಜೆ ಜಯರಾಮ ರಾಯರು ಮೂರು ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿತ್ತು ಶ್ರೇಷ್ಠ ದಾಂಡಿಗ, ಅತ್ಯುತ್ತಮ ಬೌಲರ್, ಆಲ್‌ರೌಂಡರ್ ಪ್ರಶಸ್ತಿಗಳನ್ನು ಪ್ರಾಯೋಜಿಸಿದ್ದಾರೆ.



**ಶ್ರೀಮತಿ ಸಾಧನಾ ಜೆ. ರಾವ್**: ಶ್ರೀ ಬೈಲಕೆರೆ ಜನಾರ್ಧನರಾಯರ ಪತ್ನಿ ಶ್ರೀಮತಿ ಸಾಧನಾ ಜೆ ರಾವ್‌ರವರು ಐದು ಸಾವಿರ ರೂಪಾಯಿಗಳನ್ನು ಕ್ರೀಡಾನಿಧಿಗೆ ದೇಣಿಗೆಯಾಗಿತ್ತು ಪ್ರೋತ್ಸಾಹಿಸಿದ್ದಾರೆ.

ತಾ.21-01-2018ರಂದು ನಡೆದ ಶ್ರೀಶಾರದಾ ಕಪ್ ಕ್ರಿಕೆಟ್ ಹಾಗೂ ಮಹಿಳಾ ಕ್ರೀಡಾ ಕೂಟದಲ್ಲಿ ಭಾಗವಹಿಸಿದ ಸಮಾಜ ಬಾಂಧವರಿಗೆ, ಕಾರ್ಯಕರ್ತರಿಗೆ, ತೀರ್ಪುಗಾರರಿಗೆ ಹಾಗೂ ದಾನಿಗಳಿಗೆ ಆಡಳಿತ ಮಂಡಳಿಯ ಕೃತಜ್ಞತೆಗಳು.




*With Best Compliments from :*

*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**

Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)



*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**

Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging





## ಮಹಿಳಾಕ್ರೀಡಾಕೂಟ

■...1ನೇ ಪುಟದಿಂದ

ಕೂಟಕ್ಕೆ ವಿಶೇಷ ಮೆರುಗನ್ನು ತಂದುಕೊಟ್ಟಿತು. ಭೋಜನದ ನಂತರ ಸಭಾಕಾರ್ಯಕ್ರಮ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮ ನೆರವೇರಿತು. ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾಯರು ಸಭೆಯ ಅಧ್ಯಕ್ಷರಾಗಿದ್ದರು. ಶ್ರೀಮತಿ ಸಾಧನಾ ಜೆ. ರಾವ್ ಹಾಗೂ ಶ್ರೀಮತಿ ವೀಣಾ ಜಯರಾಮ ರಾವ್ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯದರ್ಶಿಗಳಾದ ಶ್ರೀ ಕೆ. ಸುರೇಶ್ ರಾಯರು, ಕೋಶಾಧಿಕಾರಿಗಳಾದ ಶ್ರೀ ಕೆ. ಸುಧಾಕರ ರಾಯರು, ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಉಷಾ ಶ್ಯಾನುಭಾಗ್, ಸಂಚಾಲಕಿ ಶ್ರೀಮತಿ ಜಯಲಕ್ಷ್ಮಿ ಮುರಳೀಧರ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕುಮಾರಿ ಮಾನಸಾಳ ಪ್ರಾರ್ಥನೆಯೊಂದಿಗೆ ಸಭೆಯು ಆರಂಭವಾಯಿತು. ಶ್ರೀಮತಿ ಡಾ। ವಿದ್ಯಾರಾವ್ ಸ್ವಾಗತಿಸಿದರು. ಶ್ರೀಮತಿ ಸುನೀತಾ ಅತಿಥಿಗಳನ್ನು ಸಭಿಕರಿಗೆ ಪರಿಚಯಿಸಿದರು. ಶ್ರೀಮತಿ ಮೀರಾ ರಾಜೇಶ್ ಬಹುಮಾನಿತರ ಪಟ್ಟಿಯನ್ನು ಓದಿ ಹೇಳಿದಂತೆ ವಿಜೇತರಿಗೆ ಬಹುಮಾನಗಳನ್ನು ಅತಿಥಿಗಳು ವಿತರಿಸಿ ಶುಭ ಹಾರೈಸಿದರು. ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಡಾ. ವೈ. ಸುದರ್ಶನ ರಾವ್ ಚಾಕೋಲೇಟ್ ಹಂಚಿದರು. ಶ್ರೀಮತಿ ಪವಿತ್ರ ವಂದನಾರ್ಪಣೆಗೈದರು. ಶ್ರೀಮತಿ ಪ್ರೀತಿ ಸಂತೋಷ್ ಕಾರ್ಯಕ್ರಮವನ್ನು ನಿರ್ವಹಿಸಿದರು.

## ಮಹಿಳಾವೇದಿಕೆಯಿಂದ ನಡೆದ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರ ವಿವರ

ಶ್ರೀಶಾರದಾ ಮಂಟಪದಲ್ಲಿ 21-01-2018ರಂದು ಮಹಿಳಾ ವೇದಿಕೆಯ ವತಿಯಿಂದ ಮಕ್ಕಳು ಹಾಗೂ ಮಹಿಳೆಯರಿಗೆ ನಡೆದ ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರ ವಿವರ ಹೀಗಿದೆ.

**3 ವರ್ಷದ ಒಳಗಿನ ಮಕ್ಕಳಿಗೆ (ಬಲೂನು ಹೆಕ್ಕಿ ತರುವುದು)** : ಪ್ರಥಮ : ತನ್ವಿ .ಕೆ. ಎಚ್. , ದ್ವಿತೀಯ : ಮನನ್ ರಾವ್

**3 ರಿಂದ 5 ವರ್ಷದ ಒಳಗಿನ ಮಕ್ಕಳಿಗೆ (1. ದಿಂಬು ಪಾಸ್ ಮಾಡುವುದು)** : ಪ್ರಥಮ : ಪ್ರಕೃತಿ ರಾವ್, ದ್ವಿತೀಯ : ಸಂಕರ್ಷಣ ನಿಟ್ಟೂರು. **(2. ಚಾಕಲೇಟ್ ಹೆಕ್ಕಿ ತರುವುದು)** : ಪ್ರಥಮ : ಪ್ರಕೃತಿ ರಾವ್, ದ್ವಿತೀಯ : ಸಾನ್ವಿ .ಕೆ.ಹೆಚ್, ತೃತೀಯ : ಗೌರೀಶ ರಾವ್

**1ನೇ ತರಗತಿಯಿಂದ 3ನೇ ತರಗತಿಯವರೆಗಿನ ಮಕ್ಕಳಿಗೆ (1. ಲಿಂಬೆ ಹಣ್ಣಿನ ಓಟ)** : ಪ್ರಥಮ : ತನುಶ್ರೀ ಮಾರ್ಪಳ್ಳಿ, ದ್ವಿತೀಯ : ಪ್ರಣತಿ **(2. ಬಕೆಟಿಗೆ ಬಾಲ್ ಹಾಕುವುದು)** : ಪ್ರಥಮ : ಸಾತ್ವಿಕ್, ದ್ವಿತೀಯ : ಲಹರಿ.ಕೆ. ರಾವ್

**4ನೇ ತರಗತಿಯಿಂದ 6 ನೇ ತರಗತಿಯವರೆಗಿನ ಮಕ್ಕಳಿಗೆ (1. ಪುಸ್ತಕ ತಲೆ ಮೇಲೆ ಇಟ್ಟು ನಡೆಯುವುದು)** : ಪ್ರಥಮ : ಅರುಂಧತಿ, ದ್ವಿತೀಯ : ಪ್ರಜ್ವಲ್ ರಾವ್ **(2. ಗ್ಲಾಸ್‌ನಿಂದ ಪಿರಮಿಡ್ ಮಾಡುವುದು)** : ಪ್ರಥಮ : ಅಮಿತ ರಾವ್, ದ್ವಿತೀಯ : ಅರುಂಧತಿ

**7ನೇ ತರಗತಿಯಿಂದ 9 ನೇ ತರಗತಿಯವರೆಗಿನ ಮಕ್ಕಳಿಗೆ (1. ಸೂಜಿಗೆ ನೂಲು ಹಾಕುವುದು)** : ಪ್ರಥಮ : ಅನನ್ಯ ಶಾಸ್ತ್ರಿ ಬನ್ನಂಜೆ, ದ್ವಿತೀಯ : ನವ್ಯಶ್ರೀ **(2. ಸ್ಟ್ರಾನಿಂದ ನೀರೇಳೆದು ಗ್ಲಾಸ್‌ಗೆ ಭರ್ತಿ ಮಾಡುವುದು)** : ಪ್ರಥಮ : ಅದಿತ್ಯ ರಾವ್, ದ್ವಿತೀಯ : ಅಕ್ಷಯ ರಾವ್

**10ನೇ ತರಗತಿಯಿಂದ 12 ನೇ ತರಗತಿಯವರೆಗಿನ ಮಕ್ಕಳಿಗೆ (1. ಸ್ಟ್ರಾ ಜೋಡಿಸುವುದು)** : ಪ್ರಥಮ : ಸೂರಜ್, ದ್ವಿತೀಯ : ಪಲ್ಲವಿ **(2. ಊದಿದ ಬಲೂನ್ ಒಡೆಯುವುದು)** : ಪ್ರಥಮ : ಪಲ್ಲವಿ, ದ್ವಿತೀಯ : ಸೂರಜ್

**60 ವರ್ಷ ಮೇಲ್ಪಟ್ಟವರಿಗೆ (ಸ್ಟಿಕ್ಕರ್ ಗಮ್ ತೆಗೆದು ಕೈಗೆ ಅಂಟಿಸುವುದು)** : ಪ್ರಥಮ : ಜ್ಯೋತಿ ರಾವ್ ದ್ವಿತೀಯ : ವೀಣಾ ರಾವ್


**70 ವರ್ಷ ಮೇಲ್ಪಟ್ಟವರಿಗೆ (ಮಣಿ ಹೆಕ್ಕುವುದು)** : ಪ್ರಥಮ : ತುಳಸಿ ರಾವ್, ದ್ವಿತೀಯ : ಜಾನಕಿ ರಾವ್

**ಎಲ್ಲಾ ಮಹಿಳೆಯರಿಗೆ (ಬ್ಯಾಡ್‌ಮಿಂಟನ್)** : ಪ್ರಥಮ: ಶ್ರೀಮತಿ ಅರ್ಚನ, ದ್ವಿತೀಯ: ಶ್ರೀಮತಿ ಶುಭ

**ಮಕ್ಕಳಿಗೆ (ಬ್ಯಾಡ್‌ಮಿಂಟನ್)** : ಪ್ರಥಮ: ವಲ್ಲಭ, ದ್ವಿತೀಯ: ಶ್ರೀ ಕೃಷ್ಣ


# ಶ್ರೀಶಾರದಾ ದೇವಸ್ಥಾನ

**ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576102.**



ಪ್ರಿಯರೇ,

ಸ್ವಸ್ತಿ ಶ್ರೀ ವಿಳಂಬಿ ನಾಮ ಸಂ।ರದ ಚೈತ್ರ ಶುಕ್ಲ 1ಯು

**ತಾ.18-03-2018ನೇ ರವಿವಾರದಿಂದ** ಚೈತ್ರ ಶುಕ್ಲ 9ಯು

**ತಾ.25-03-2018ನೇ ರವಿವಾರದ ತನಕ**

**ಕಿರುನವರಾತ್ರಿ ಉತ್ಸವವು** ಜರಗಲಿರುವುದು.

ಈ ಪ್ರಯುಕ್ತ ಪ್ರತಿದಿನ ಸಂಜೆ ದೇವಿಗೆ ವಿಶೇಷ ಪೂಜೆ ನೆರವೇರಲಿದೆ.

**ತಾ.25-03-2018ನೇ ರವಿವಾರ ಸಂಜೆ ಗಂಟೆ 5-00ರಿಂದ**

## ಸಾಮೂಹಿಕ ಶ್ರೀದುರ್ಗಾನಮಸ್ಕಾರ ಪೂಜೆಯು

ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಸೇವಾ ರೂಪದಲ್ಲಿ ಪೂಜೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಅಪರಾಹ್ನ 3ರಿಂದ ದೀಪವಿಟ್ಟು ಮಂಡಲ ರಚನೆ, ಸಂಜೆ 5 ರಿಂದ ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತಿ ಪಾರಾಯಣ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ ವಿಧಿಗಳು ನಡೆಯಲಿವೆ. **ಸೇವಾ ಶುಲ್ಕ ರೂ.150/-** **- ಆಡಳಿತ ಮಂಡಳಿ**







## ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಸುರತ್ಕಲ್ "ಶ್ರೀ ಸುಬ್ರಹ್ಮಣ್ಯ ಟ್ರೋಫಿ-2018"



ದಿನಾಂಕ 28-01-2018ನೇ ಭಾನುವಾರದಂದು ನಮ್ಮ ಸಂಘದ ಹಾಗೂ ಯುವ ವೇದಿಕೆಯ ಜಂಟಿ ಆಶ್ರಯದಲ್ಲಿ ಸುರತ್ಕಲ್ ಗೋವಿಂದ ದಾಸ ಕಾಲೇಜಿನ ಕ್ರೀಡಾಂಗಣದಲ್ಲಿ "ಸುಬ್ರಹ್ಮಣ್ಯ ಟ್ರೋಫಿ-2018"ರ ಕ್ರಿಕೆಟ್ ಪಂದ್ಯಾಟವು ಜರಗಿತು. ಈ ಪಂದ್ಯಾಟವು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದ್ದು ರಾಜ್ಯಾದ್ಯಂತ ಸುಮಾರು 8 ತಂಡಗಳು ಭಾಗವಹಿಸಿದ್ದವು. ಪಂದ್ಯದ ಉದ್ಘಾಟನೆಯನ್ನು ದೀಪ ಬೆಳಗಿಸಿ ಪ್ರಾರ್ಥನೆ ಮಾಡುವುದರೊಂದಿಗೆ ಆರಂಭಿಸಲಾಯಿತು.

ಸಂಘದ ಅಧ್ಯಕ್ಷರಾದ ಶ್ರೀ.ಕೆ. ಮಾಧವ ರಾವ್ ಬಂದಿರುವ ಅತಿಥಿಗಳನ್ನು ವಿವಿಧ ಜಿಲ್ಲೆಗಳಿಂದ ಆಗಮಿಸಿದ ಕ್ರೀಡಾ ತಂಡದವರನ್ನು ಹಾಗೂ ಸಂಘದ ಸದಸ್ಯರನ್ನು ಸ್ವಾಗತಿಸಿದರು. ಸಮಾರಂಭದ ಉದ್ಘಾಟಕರಾದ ಶ್ರೀ ಪ್ರವೀಣ್ ಕುಮಾರ್ ಅದ್ಯಪಾಡಿ, ನ್ಯಾಯವಾದಿ ಮಂಗಳೂರು ಇವರು ಕ್ರಿಕೆಟ್ ಪಂದ್ಯಾಟ ಆಡುವುದರ ಮುಖೇನ ನಮ್ಮ ಸಮಾಜದ ಯುವಕರನ್ನು ಒಗ್ಗೂಡಿಸುವಂತಹ ಮಹತ್ತರವಾದ ಕಾರ್ಯವನ್ನು ನಡೆಸುತ್ತಿರುವುದಕ್ಕೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮಾತ್ರವಲ್ಲದೆ ನಮ್ಮ ಸಮಾಜದ ಯುವಕರು ಇದರಿಂದ ಸ್ಫೂರ್ತಿ ಪಡೆದು ಮುಂದೆ ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ಕ್ರಿಕೆಟ್ ಪಂದ್ಯಾಟದಲ್ಲಿ ಭಾಗವಹಿಸಲು ಅವಕಾಶ ಸಿಗುವಂತಾಗಲಿ ಎಂದು ಹಾರೈಸಿದರು. ವೇದಿಕೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಮಾಧವ ರಾವ್, ಗೌರವಾಧ್ಯಕ್ಷರಾದ ಶ್ರೀ ಭವಾನಿ ಶಂಕರ ರಾವ್, ಮುಖ್ಯ ಅತಿಥಿಗಳಾದ ಶ್ರೀ ಪ್ರವೀಣ್ ಕುಮಾರ್ ಅದ್ಯಪಾಡಿ ಹಾಗೂ ಉದ್ಯಮಿ ಶ್ರೀವಿಜಯಶಂಕರ್, ಯುವ ವೇದಿಕೆಯ ಕಾರ್ಯಾಧ್ಯಕ್ಷ ಸುರೇಂದ್ರ ಹಾಗೂ ಅಧ್ಯಕ್ಷ ಶ್ರೀ ಸಂಕೇತ್ ಶ್ಯಾನುಭಾಗ್, ಸಂಘದ ಕಾರ್ಯದರ್ಶಿ ಶ್ರೀ ಪಾಲಚಂದ್ರ ಶರ್ಮ, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಪರಿಮಳ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷರುಗಳಾದ ಶ್ರೀ ಗೋಪಾಲಕೃಷ್ಣ ಹಾಗೂ ವಾಸುದೇವ ಶ್ಯಾನುಭಾಗ್, ಕೋಶಾಧಿಕಾರಿ ಶ್ರೀ ಸಿ. ರಾಘವೇಂದ್ರ ರಾವ್, ಜೊತೆ ಕಾರ್ಯದರ್ಶಿಯವರಾದ ಶ್ರೀ ಸುಕುಮಾರ್, ಶ್ರೀ ಪ್ರವೀಣ್ ರಾವ್ ಮಲ್ಲಮಾರ್ ಹಾಗೂ ಶಿವಪ್ರಸಾದ್ ಶ್ಯಾನುಭಾಗ್ ಮತ್ತು ಸಂಘದ ಸದಸ್ಯರು ಹಾಗೂ ಸಮಾಜ ಬಾಂಧವರು ಕ್ರೀಡಾಂಗಣದಲ್ಲಿ ಉಪಸ್ಥಿತರಿದ್ದರು.

ಸಾಯಂಕಾಲ 6.00 ಗಂಟೆಗೆ ಏರ್ಪಡಿಸಿದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಉದ್ಯಮಿ ಶ್ರೀ ಪಿ. ಶ್ರೀಕಾಂತರಾವ್ ಕೋಶಾಧಿಕಾರಿ ಸುಬ್ರಹ್ಮಣ್ಯ ಸಭಾ (ರಿ) ಮಂಗಳೂರು; ಶ್ರೀ ಅಶೋಕ್ ಕುಮಾರ್ ಮುಂಡ್ಕೂರು ಜೊತೆ ಕಾರ್ಯದರ್ಶಿ ಯುವವೇದಿಕೆ ಪಡುಬಿದ್ರಿ ಸ್ಥಾನಿಕ ಸಂಘ (ರಿ); ಶ್ರೀ ಸುಧಾಕರ ರಾವ್ ಮಾಜಿ ಕಾರ್ಯದರ್ಶಿ ಪಡುಬಿದ್ರಿ ಸ್ಥಾನಿಕ ಸಂಘ (ರಿ); ಸುರತ್ಕಲ್ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್, ಯುವ ವೇದಿಕೆಯ ಅಧ್ಯಕ್ಷ ಶ್ರೀ ಸಂಕೇತ್ ಶ್ಯಾನುಬಾಗ್, ಮಹಿಳಾ ವೇದಿಕೆಯ ಉಪಾಧ್ಯಕ್ಷೆ ಶ್ರೀಮತಿ ಪ್ರಶಾಂತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸುಬ್ರಹ್ಮಣ್ಯ ಟ್ರೋಫಿಯ ಪ್ರಥಮ ಬಹುಮಾನವನ್ನು ವಿಟ್ಲ ಸಂಘವು ಹಾಗೂ ದ್ವಿತೀಯ ಬಹುಮಾನವನ್ನು ನಂದಳಿಕೆ ಸಂಘವು ಪಡೆದುಕೊಂಡಿತು. ಟ್ರೋಫಿಯ ಪ್ರಾಯೋಜಕರಾಗಿ ಶ್ರೀ ಶ್ರೀಕಾಂತ ರಾವ್ ಪಿ., ಶ್ರೀ ರವಿರಾಜ್ ರಾವ್ ಎಲ್ಲೂರು, ಶ್ರೀ ಜನಕರಾಜ್ ಕಿನ್ನಿಗೋಳಿ, ಶ್ರೀ ವಿಜಯ ಕುಮಾರ್ ಅದ್ಯಪಾಡಿ, ಶ್ರೀ ಮಹೇಶ್ ಉಡುಪಿ ಹಾಗೂ ಕರ್ನಾಟಕ ಬ್ಯಾಂಕ್ ಸಹಕರಿಸಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ಕುಸುಮ ನಿರೂಪಿಸಿದರು.


With Best Compliments From :

Ph : 98459 92859

**Ganesh Hebbar & Associates**

CHARTERED ACCOUNTANT

S.M.S.P. Complex, Udupi - 576 101.



**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

# "ಆಟಿದ ಸ್ಪೆಷಲ್ ತಿಂಡಿ ತಿನಿಸುಲು"

- ವೈ. ಮೋಹನ ರಾವ್




ಕೃತಿ : **ಆಟಿದ ಸ್ಪೆಷಲ್ ತಿಂಡಿ ತಿನಿಸುಲು**
ಲೇಖಕಿ : **ಶ್ರೀಮತಿ ಶರಾವತಿ ಯು.ಆರ್.** ಪ್ರಕಟಣೆ ಜವಾಬ್ದಾರಿ : **ಡಾ। ಎನ್.ಟಿ.ಅಂಚನ್, ಪಡುಬಿದ್ರಿ**

"ಆಟಿದ ಸ್ಪೆಷಲ್ ತಿಂಡಿ ತಿನಿಸುಲು" ಎಂಬ ಪುಸ್ತಕದ ಲೇಖಕಿ ಶ್ರೀಮತಿ ಶರಾವತಿ ಯು.ಆರ್. ಈ ಪುಸ್ತಕದ ತಲೆಬರಹ ತುಳುವಿನಲ್ಲಿದೆ. ತಿಂಡಿ ತಿನಿಸುಗಳ ಆಕರ್ಷಕ ಚಿತ್ರವೂ ಪುಸ್ತಕದ ಮುಖಪುಟವನ್ನು ಅಲಂಕರಿಸಿವೆ. ಗರ್ಗದ ಚಟ್ನಿ, ತಿಮರೆ ಚಟ್ನಿ, ಕೊಡಿ ಗಟ್ಟಿ, ತೊಜಂಕು ಸೊಪ್ಪಿನ ತಂಬಳಿ, ನುಗ್ಗೆ ಸೊಪ್ಪಿನ ಸಾಂಬಾರ್, ತೊಜಂಕು ಸೊಪ್ಪಿನ ಸುಕ್ಕ, ಪತ್ರೊಡೆ ಒಗ್ಗರಣೆ, ತೇವ್ ಅಂಬಡೆ, ತೇಟ್ಲ ಬೋಳೆ ಪಲ್ಯ, ಉಪ್ಪಡ್ ಪಚ್ಚೀರ್ ಪಲ್ಯ, ಕುಜ್ಜೆ ಅಪ್ಪ, ಕುಜ್ಜೆ ಸೋಂಟೆ, ಕುಡು ಸಾರು, ಮಾಂಬಳ್ ಗೊಜ್ಜು, ಪುನರ್‌ಪುಳಿ ಸಾರು, ಎಡೆಮುಂಚಿ ಪಾನಕ ಹೀಗೆ ಸುಮಾರು 111 ತಿಂಡಿ ತಿನಿಸುಗಳ ಹೆಸರುಗಳನ್ನು ತುಳುವಿನಲ್ಲಿ ಬರೆದಿದ್ದಾರೆ. ಈ ಕೆಲವು ತಿಂಡಿ ತಿನಿಸುಗಳ ಆಕರ್ಷಕ ಚಿತ್ರವಿವೆ. ಆದರೆ ಮಾಡುವ ವಿಧಾನ, ಬೇಕಾಗುವ ಸಾಮಾನು, ಇತ್ಯಾದಿ ಕನ್ನಡದಲ್ಲೇ ಉಲ್ಲೇಖಿಸಲಾಗಿದೆ. ಈ ತಿಂಡಿ ತಿನಿಸುಗಳ ಹೆಸರುಗಳನ್ನು ಕೇಳಿದಾಗ ತುಳುನಾಡಿನ ನಮ್ಮ ಬಾಯಲ್ಲಿ ನೀರೂರುತ್ತದೆ. ಆದರೆ ಇವನ್ನು ತಯಾರಿಸುವ ತುಳುನಾಡಿನ ಕೈಗಳೆಷ್ಟೋ? ಇವು ತುಳುನಾಡಿನ ಮನಸ್ಸಿನಲ್ಲಿ ಗಟ್ಟಿಯಾಗಿ ಉಳಿಯುವ ಹೆಸರುಗಳು.

ಪುಸ್ತಕದ 'ಮುನ್ನುಡಿ'ಯಲ್ಲಿ ಜಾನಪದ ವಿದ್ವಾಂಸರಾದ ಕೆ.ಎಲ್.ಕುಂಡಂತಾಯ ಇವರು ಬರೆದಿದ್ದಾರೆ ಹೀಗೆ – "ಏನಾದರೂ ಸ್ಪೆಷಲ್ ಬೇಕು ಆಗ ಮಾತ್ರ ಆಕರ್ಷಣೆ. ಬಹುಶಃ ಆಟಿ ಎಂಬ ಜನಪದ ತಿಂಗಳಿನಲ್ಲಿ ಸ್ಪೆಷಲ್ ಎಂಬ ಹಳೆಯದನ್ನು ನೆನಪಿಸುವ ಪ್ರಯತ್ನವಾಗಿ 'ಆಟಿದ ಸ್ಪೆಷಲ್'. "ಆಟಿದೊಂಜಿ ದಿನ" ಇತ್ತೀಚೆಗಿನ ವರ್ಷಗಳಲ್ಲಿ ಜನಪ್ರಿಯವಾಗುತ್ತಿದೆ. ಕಾರಣ ಸಾಮಾನ್ಯವಾಗಿ ನಡೆಯುವ ಪಾರ್ಟಿ, ಗೆಟ್‌ಟುಗೆದರ್‌ಗಿಂತ ಭಿನ್ನವಾಗಿದೆ. ಏನೋ ವಿಶೇಷವಾಗಿರಬೇಕು, ಸ್ಪೆಷಲ್ ಆಗಿರಬೇಕು ಎಂಬುದು ಕಾರಣ. ವರ್ಷದಲ್ಲಿ ಒಂದು ದಿನವಾದರೂ ಸರಳ ಜೀವನ ವಿಧಾನವು ಹೈಥಿಂಕಿಂಗ್‌ಗಳ ಭಾಗವಹಿಸುವಿಕೆಯಲ್ಲಿ 'ಹೈಲೆವೆಲ್' ವಿಷಯವಾಗುತ್ತದೆ ಎಂಬುದು ಸಂತೋಷದ ವಿಷಯ."

ಪುಸ್ತಕದ ಲೇಖಕಿ ಶ್ರೀಮತಿ ಶರಾವತಿ ಯು.ಆರ್. 'ನಮ್ಮಯ ನುಡಿ..'ಯಲ್ಲಿ ತಿಳಿಸುತ್ತಾರೆ – "ಆಹಾರವೇ ನಮ್ಮ ಔಷಧವಾಗಲಿ ಔಷಧ ಆಹಾರವಾಗದಿರಲಿ" ಎಂಬ ಮಾತಿನಂತೆ ದೇಹದ ಬಲವರ್ಧನೆಗಾಗಿ ಮತ್ತು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ನಾವು ಆಹಾರವನ್ನು ಸೇವಿಸುತ್ತೇವೆ. ಪೌಷ್ಟಿಕ ಆಹಾರ ಸೇವನೆ ಉತ್ತಮ ಆರೋಗ್ಯಕ್ಕೆ ಮೂಲ. "ಆಹಾರಾಧೀ ನಮಾರೋಗ್ಯಮ್" ಎಂದರೆ ಆರೋಗ್ಯವು ಆಹಾರ ವನ್ನವಲಂಬಿಸಿದೆ ಎಂದರ್ಥ. ಒಳ್ಳೆಯ ಆಹಾರದಿಂದ ಒಳ್ಳೆಯ ಆರೋಗ್ಯ ದೊರೆಯುತ್ತದೆ. ಸುಮಾರು 15 ವರ್ಷಗಳ ಹಿಂದೆ ಮುಲ್ಕಿ ಯುವವಾಹಿನಿ ಸಂಘಟನೆಯವರು ಆಟಿಡೊಂಜಿ ದಿನ ಕಾರ್ಯಕ್ರಮವನ್ನು ಚಂದ್ರಶೇಖರ್ ಸುವರ್ಣರ ನಾಯಕತ್ವದಲ್ಲಿ ತುಂಬಾ ಯಶಸ್ವಿಯಾಗಿ ವಿವಿಧ ಬಗೆಬಗೆಯ ತಿಂಡಿ ತಿನಿಸುಗಳ ವೈವಿಧ್ಯತೆಯೊಂದಿಗೆ ಕಾರ್ಯಕ್ರಮವನ್ನು ಆಯೋಜಿಸಿದ್ದರು. ತದನಂತರ ಈ ಕಾರ್ಯಕ್ರಮ ತಾಲೂಕು ಮಟ್ಟದಲ್ಲಿ, ಎಲ್ಲಾ ಸಂಘ ಸಂಸ್ಥೆಗಳಲ್ಲಿ ಇದರ ಆಚರಣೆ ಮಾಡಲು ಪ್ರಾರಂಭಿಸಿದರು. ಹೆಚ್ಚೇಕೆ ದೂರದ ಮುಂಬಯಿಯಲ್ಲಿ ಕೂಡಾ ತುಳು ಬಾಂಧವರೆಲ್ಲಾ ಒಟ್ಟಾಗಿ 'ಆಟಿಡೊಂಜಿ ದಿನ" ಆಚರಿಸಿ ಸಂಭ್ರಮಿಸಿದರು. ಊರಿನಿಂದ ಕೆಸುವಿನೆಲೆ, ತಿಮರೆ, ತೊಜಂಕ್, ಅಂಬಡೆ ಇತ್ಯಾದಿ ತರಿಸಿ ಬಗೆಬಗೆಯ ಅಡುಗೆ ತಯಾರಿಸಿ ತಿಂದು ಸಂತಸಗೊಂಡು ತಮ್ಮ ಮಕ್ಕಳಿಗೂ ಹಿರಿಯರ ಸಂಪ್ರದಾಯಗಳ ಬಗ್ಗೆ ತಿಳಿಯಪಡಿಸಿದರು. ಈಗೆರಡು ವರ್ಷಗಳಲ್ಲಿ ಶಾಲೆಗಳಲ್ಲಿ ಕೂಡಾ ಇದರ ಆಚರಣೆ ಪ್ರಾರಂಭವಾಗಿದೆ. ಆದರೆ ಕೆಲವು ತಾಯಂದಿರಿಗೆ ಕೆಲವು ತಿನಿಸುಗಳನ್ನು ಹೇಗೆ ತಯಾರಿಸುವುದು ಎಂಬ ಬಗ್ಗೆ ತಿಳುವಳಿಕೆ ಇಲ್ಲ. ಅನೇಕ ಕಾರ್ಯಕ್ರಮಗಳಲ್ಲಿ ನಾನು ಅತಿಥಿಯಾಗಿ ಭಾಗವಹಿಸಿದಾಗ ಹೆಚ್ಚಿನವರ ಅನಿಸಿಕೆ ಒಂದೇ, "ಈ ಆಚರಣೆ ಚೆನ್ನಾಗಿದೆ, ಆರೋಗ್ಯಕ್ಕೂ ಒಳ್ಳೆಯದಿದೆ. ಹಿಂದಿನವರು ಇದೇ ರೀತಿಯ ಆಹಾರ ತಯಾರಿಸಿ ತಿಂದು ಗಟ್ಟಿ ಮುಟ್ಟಾಗಿದ್ದು ಹಲವು ವರ್ಷಗಳ ಕಾಲ ಉತ್ತಮ ಆರೋಗ್ಯದಿಂದ ಬಾಳಿ ಬದುಕಿದ್ದರು. ನಮಗೆ ಮಾಡಲು ಗೊತ್ತಿಲ್ಲ, ಹೇಳಿ ಕೊಡುವವರೂ ಇಲ್ಲ" ಎಂದು. ಆದ್ದರಿಂದ ನಾನು ಮತ್ತು ನನ್ನ ಮಗಳು ವಿನುತ ಒಟ್ಟು ಸೇರಿ ಈ ಪುಸ್ತಕ ಬರೆಯುವ ಸಾಹಸಕ್ಕೆ ಕೈ ಹಾಕಿದೆವು."

ಉದಾಹರಣೆಗೆ "ತೆಕ್ಕರೆ ಗಟ್ಟಿ" ಮಾಡುವ ವಿಧಾನ :

ಸಂಪನ್ಮೂಲಗಳು :

1) ಅಕ್ಕಿ 2 ಲೋಟ 2) ತೆಕ್ಕರೆ 1 3) ಉಪ್ಪು ರುಚಿಗೆ

ಅಕ್ಕಿಯನ್ನು ನೆನೆಸಿ, ತೊಳೆದು ಉಪ್ಪು ಸೇರಿಸಿ ನೀರು ಹಾಕದೆ ರುಬ್ಬಿಕೊಳ್ಳಿ. ನಂತರ ಇದಕ್ಕೆ ತೆಕ್ಕರೆ ತುರಿ ಸೇರಿಸಿ ಬಾಣಲೆಗೆ ರುಬ್ಬಿದ ಹಿಟ್ಟನ್ನು ಹಾಕಿ ಮಗುಚುತ್ತಾ ಹಿಟ್ಟು ದಪ್ಪ ಆದ ಮೇಲೆ ಕೆಳಗಿಳಿಸಿ, ಹಿಟ್ಟು ಸ್ವಲ್ಪ ತಣ್ಣಗಾದ ಮೇಲೆ ಬಾಳೆ ಎಲೆಯನ್ನು ಬಾಡಿಸಿ ಅದಕ್ಕೆ ಹಿಟ್ಟನ್ನು ಸ್ವಲ್ಪವಾಗಿ ಬಾಳೆ ಎಲೆಯನ್ನು 4 ಬದಿಯಲ್ಲಿ ಮಡಚಿ ಉಗಿಯಲ್ಲಿ ಬೇಯಿಸಿ.

ಹೀಗೆ ಅಡುಗೆಯ ನೂರ ಹನ್ನೊಂದು ವಿವಿಧ ತಿಂಡಿ ತಿನಿಸುಗಳ ಸ್ಪೆಷಾಲಿಟಿಯಿಂದಾಗಿ ಈ ಪುಸ್ತಕ ಎಲ್ಲರ ಗಮನ ಸೆಳೆಯುತ್ತದೆ.

## ಕುಂಭ ಮಾಸದ ವಿಶೇಷ ದಿನಗಳು

| | | | |
|---|---|---|---|
| **15–02–2018** | **ಅಮಾವಾಸ್ಯೆ** | **14–03–2018** | **ಮೀನ ಸಂಕ್ರಮಣ, ಶ್ರೀಶಾರದಾ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವ** |
| **16–02–2018** | **ಶಿಶಿರ ಋತು, ಫಾಲ್ಗುಣ ಮಾಸ ಶುಕ್ಲಪಕ್ಷಾರಂಭ** | **17–03–2018** | **ಅಮಾವಾಸ್ಯೆ** |
| **26–02–2018** | **ಸರ್ವೈಕಾದಶಿ** | **18–03–2018** | **ಚಾಂದ್ರ ಯುಗಾದಿ, ವಿಳಂಬಿ ಸಂವತ್ಸರದ ವಸಂತ ಋತು, ಚೈತ್ರ ಮಾಸ ಮಾಸ ಶುಕ್ಲಪಕ್ಷಾರಂಭ, ಕಿರು ನವರಾತ್ರಿ ಆರಂಭ** |
| **01–03–2018** | **ಹೋಳಿ ಹುಣ್ಣಿಮೆ, ಕಾಮದಹನ, ಹೋಳಿ ಹಬ್ಬ** | **25–03–2018** | **ಶ್ರೀ ರಾಮನವಮಿ, ಸಾಮೂಹಿಕ ದುರ್ಗಾ ನಮಸ್ಕಾರ ಪೂಜೆ** |
| **02–03–2018** | **ಶಿಶಿರ ಋತು, ಫಾಲ್ಗುಣ ಮಾಸ ಕೃಷ್ಣಪಕ್ಷಾರಂಭ** | | |
| **05–03–2018** | **ಸಂಕಷ್ಟಹರ ಚತುರ್ಥೀ, ಚಂದ್ರೋದಯ ರಾತ್ರಿ 9–44ಕ್ಕೆ** | | |
| **13–03–2018** | **ಸರ್ವೈಕಾದಶಿ** | | |

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

**ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.**

**ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.**

**ಪ್ರೊ : ಮಂಜುನಾಥ ಹೆಬ್ಬಾರ್** **ಸಂಪರ್ಕ ಸಂಖ್ಯೆ 9611099894**

# ಅನು ಬೆಳ್ಳೆಯವರ ಪುಸ್ತಕ ಬಿಡುಗಡೆ



ಅನು ಬೆಳ್ಳೆ (ರಾಘವೇಂದ್ರ, ಬಿ ರಾವ್) ಇವರ ಹೊಸ ಕನ್ನಡ ಕಾದಂಬರಿ 'ಕುಡ್ಪಲ್ ಭೂತ' ಬೆಂಗಳೂರಿನ ವಾಡಿಯಾ ಸಭಾಂಗಣದಲ್ಲಿ ಬಿಡುಗಡೆಯಾಯಿತು. ಈ ಸಂದರ್ಭದಲ್ಲಿ ಅನು ಬೆಳ್ಳೆ (ರಾಘವೇಂದ್ರ, ಬಿ. ರಾವ್), ಜಿ.ಬಿ.ಹರೀಶ್ (ವಿಮರ್ಶಕ), ಬೈರೇಮಂಗಲ ರಾಮೇಗೌಡ(ಹಂಪಿ ವಿಶ್ವವಿದ್ಯಾಲಯದ ಕುಲಸಚಿವರು) ಮಲ್ಲೇಪುರಂ, ವೆಂಕಟೇಶ್ (ಸಂಸ್ಕೃತ ವಿಶ್ವವಿದ್ಯಾಲಯದ ನಿವೃತ್ತ ಕುಲಸಚಿವರು), ಸು. ರುದ್ರಮೂರ್ತಿ (ಕಾದಂಬರಿಕಾರರು) ಮತ್ತು ಕೆ. ಮುಕುಂದನ್ (ಲೇಖಕ) ಉಪಸ್ಥಿತರಿದ್ದರು.

॥ಶ್ರೀ ದುರ್ಗಾಪರಮೇಶ್ವರಿ ಪ್ರಸನ್ನ॥

**ಬಯಲಾಟ ಸವಿನಯ ಆಮಂತ್ರಣ**

ಮಾನ್ಯರೇ,

ದಿನಾಂಕ.19–02–2018 ನೇ ಸೋಮವಾರ ರಾತ್ರಿ ಗಂಟೆ 8.30 ರಿಂದ ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಕಲ್ಯಾಣ ಮಂಟಪದ ವಠಾರದಲ್ಲಿ

**ಕಟೀಲು ಶ್ರೀ ದುರ್ಗಾಪರಮೇಶ್ವರೀ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿಯ**

**4ನೇ ಮೇಳದ ಪ್ರಸಿದ್ಧ ಕಲಾವಿದವರಿಂದ**

**ಸಂಪೂರ್ಣ ಶ್ರೀ ದೇವೀ ಮಹಾತ್ಮೆ**

**ಎಂಬ ಪುಣ್ಯ ಯಕ್ಷಗಾನ ಹರಕೆ ಬಯಲಾಟವು ಸಂಪನ್ನಗೊಳ್ಳಲಿದೆ.**

ಈ ಕಾರ್ಯಕ್ರಮದಲ್ಲಿ ತನ್ನ ಸುಶ್ರಾವ್ಯ ಕಂಠದಿಂದ ಯಕ್ಷಗಾನ ರಂಗದಲ್ಲಿ ಮನೆಮಾತಾಗಿರುವ ಭಾಗವತರಾದ ಶ್ರೀ ಸತೀಶ್ ಪಟ್ಲ ಇವರು ತಮ್ಮ ಮನರಂಜಿಸಲಿದ್ದಾರೆ. ಕಲಾಭಿಮಾನಿಗಳಾದ ತಾವೆಲ್ಲರೂ ಆಗಮಿಸಿ ರಾತ್ರಿ ಗಂಟೆ 9.00 ರಿಂದ ನೆರವೇರುವ ಅನ್ನ ಸಂತರ್ಪಣೆ ಕಾರ್ಯಕ್ರಮದಲ್ಲೂ ಪಾಲ್ಗೊಂಡು ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಬಿ. ಜಯರಾಮ ರಾವ್–ವೀಣಾ ಜಯರಾಮ್**
**ಸೌರಭ್ ಜೆ. ರಾವ್–ಅಪೂರ್ವ**
**ಮತ್ತು ಸಹೋದರ–ಸಹೋದರಿಯರು ಹಾಗೂ ಬಂಧುಮಿತ್ರರು**
'ಅನುಗ್ರಹ', ಪಿಲಿಚಂಡಿ ಲೇನ್, ಉಡುಪಿ. ಮೊ: 09844545040.

# ಕುಮಾರಿ ದಿಶಾಳ ಸಂಗೀತ ಕಾರ್ಯಕ್ರಮ



ಶ್ರೀ ಪ್ರಕಾಶ ರಾವ್ ಇವರ ಪುತ್ರಿ ಕುಮಾರಿ ದಿಶಾರಾವ್‌ಳ ವೀಣಾವಾದನ ಕಾರ್ಯಕ್ರಮವು ಉಡುಪಿ ಪರ್ಯಾಯದ ಅಂಗವಾಗಿ ರಾಜಾಂಗಣದಲ್ಲಿ ನೆರವೇರಿತು. ಉದಯೋನ್ಮುಖ ಪ್ರತಿಭೆ ದಿಶಾಳ ಹಿಮಗಿರಿತನಯೆ, ತಿರುಪತಿ ವೆಂಕಟರಮಣ, ಬ್ರಹ್ಮಮುರಾರಿ ಇತ್ಯಾದಿ ಗೀತೆಗಳು ಕೇಳುಗರ ಮನಸೂರೆಗೊಂಡವು. ಪಕ್ಕವಾದ್ಯದಲ್ಲಿ (ಕೀಬೋರ್ಡ್) ಶ್ರೀ ಪ್ರಕಾಶ ರಾವ್ ಸಹಕರಿಸಿದರು.



**ಎಮ್. ದೇವಾನಂದ್ ಭಟ್** Cell : 9845644556, 9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

**ಬೆಳ್ವಾಯಿ–574213** (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – **574 164** (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ಪರ್ಯಾಯಕ್ಕೆ ಹೊರೆಕಾಣಿಕೆ




ಪಲಿಮಾರು ಶ್ರೀ ಶ್ರೀಗಳ ಪರ್ಯಾಯ ಮಹೋತ್ಸವದ ಸಂದರ್ಭದಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಮಾಜದ ಸದಸ್ಯರು ಉಡುಪಿ ಬ್ರಾಹ್ಮಣ ಸಭಾದೊಂದಿಗೆ ಹೊರೆಕಾಣಿಕೆಯನ್ನು ಸಮರ್ಪಿಸಿದರು. ಶ್ರೀ ಶ್ರೀಗಳು ಫಲಮಂತ್ರಾಕ್ಷತೆ ನೀಡಿ ಅನುಗ್ರಹಿಸಿದರು. ಶ್ರೀ ಕೊಕ್ರಾಡಿ ಸುರೇಶ್ ರಾವ್ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

## ಜೀರ್ಣೋದ್ಧಾರಕ್ಕಾಗಿ ಶಿಲಾನ್ಯಾಸ



ಬಾರಕೂರು ಧರ್ಮಶಾಲೆ ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನದ ಶ್ರೀ ನಾಗದೇವರ ಗುಡಿಯನ್ನು ಸುಮಾರು 15 ಲಕ್ಷ ರೂಪಾಯಿ ವೆಚ್ಚದಲ್ಲಿ ಜೀರ್ಣೋದ್ಧಾರ ಹಾಗೂ ಧಾರ್ಮಿಕ ಕಾರ್ಯಕ್ರಮ ಮಾಡುವರೇ ಶಿಲಾನ್ಯಾಸ ಕಾರ್ಯ ನೆರವೇರಿಸಲಾಯಿತು.

## ಚೌಳಿಕೆರೆಯಲ್ಲಿ ಶತಚಂಡಿಕಾಯಾಗ



ಬಾರಕೂರು ಚೌಳಿಕೆರೆ ಸುಬ್ರಹ್ಮಣ್ಯೇಶ್ವರ ದೇವರ ಸನ್ನಧಿಯಲ್ಲಿ ಶ್ರೀಮತಿ ಮತ್ತು ಶ್ರೀ ರಾಘವೇಂದ್ರ ಭಟ್ ಇವರ ನೇತೃತ್ವದಲ್ಲಿ ತಾ17-01-2018 ರಿಂದ 21-01-2018ರ ತನಕ ಶತಚಂಡಿಕಾಯಾಗವು ಸಕಲ ಧಾರ್ಮಿಕ ವಿಧಿವಿಧಾನಗಳೊಂದಿಗೆ ಅದ್ದೂರಿಯಾಗಿ ನೆರವೇರಿತು. ತಾ21-01-2018ರಂದು ಪೂರ್ಣಾಹುತಿಯು ಸಾವಿರಾರು ಭಕ್ತರ ಕುಟುಂಬಸ್ಥರ ಸಮ್ಮುಖದಲ್ಲಿ ನೆರವೇರಿತು.




## ಡಿಜಿಟಲ್ ಏಜ್ ಸೊಲ್ಯುಷನ್ಸ್ ಕಂಪನಿಗೆ ಪ್ರಶಸ್ತಿ

ಬೆಂಗಳೂರಿನ ಬನ್ನೇರುಗಟ್ಟ ರಸ್ತೆಯಲ್ಲಿರುವ ಡಿಜಿಟಲ್ ಏಜ್ ಸೊಲುಶನ್ಸ್ ಕಂಪನಿಯು ಕಾರ್ಯಕ್ಷಮತೆಯನ್ನು ಶ್ಲಾಘಿಸಿ ಏರೋನಾಟಿಕಲ್ ಡೆವಲಪ್‌ಮೆಂಟ್ ಡಿಆರ್‌ಡಿಒ ಸಂಸ್ಥೆಯು ಕ್ರಿಯೇಟಿವ್ ಪಾರ್ಟ್‌ನರ್ ಶಿಪ್ ಅವಾರ್ಡ್ 2017ನ್ನು ನೀಡಿದೆ. ಶ್ರೀ ದಿನೇಶ್ ಶಾಸ್ತ್ರಿ ಇವರು ಈ ಸಂಸ್ಥೆಯ ನಿರ್ದೇಶಕರಾಗಿದ್ದಾರೆ. ಅವರ ಪತ್ನಿ ಶ್ರೀಮತಿ ಉಷಾರವರು ಇಸ್ರೋ ಸಂಸ್ಥೆಯಲ್ಲಿ ಹಿರಿಯ ವಿಜ್ಞಾನಿಯಾಗಿದ್ದಾರೆ.

## ಡಾ| ವೈ. ಅವನೀಂದ್ರನಾಥ ರಾವ್‌ರವರಿಗೆ ಪ್ರಶಸ್ತಿ

ದೆಹಲಿಯಲ್ಲಿ ಕೇಂದ್ರಸರಕಾರದ ಉನ್ನತ ಗ್ರಂಥಾಧಿಕಾರಿಯಾಗಿರುವ ಡಾ.ವೈ.ಅವನೀಂದ್ರನಾಥ ರಾವ್‌ರವರು ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆಯನ್ನು ಗುರುತಿಸಿ ರಾಯಚೂರಿನ ಕಲಾಸಂತುಲ ಸಂಸ್ಥೆಯು "ಭಾರತ ಗೌರವ" ಪ್ರಶಸ್ತಿ ನೀಡಿ ಗೌರವಿಸಿದೆ. ಖ್ಯಾತ ಸಾಹಿತಿ ಶ್ರೀ ದೊಡ್ಡರಂಗೇಗೌಡ ಇವರು ಈ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ದೆಹಲಿಯ ಕನ್ನಡ ಸಂಘದ ಆಶ್ರಯದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವು ಜರಗಿತು.

## "ವಿಷ್ಣುಮಂಗಲಕ್ಕೆ ತಿರುಪತಿ ದೇವರ ಆಗಮನ"



ಕೂಡ್ಲು ವಿಷ್ಣುಮಂಗಲ ಶ್ರೀ ಮಹಾವಿಷ್ಣು ದೇವಸ್ಥಾನದ ಅರ್ಚಕರಾದ ಪ್ರಸನ್ನ ಶ್ಯಾನುಭಾಗ ಅವರ ನಿವಾಸ ವಿಷ್ಣುಮಂಗಲಕ್ಕೆ ಶ್ರೀದೇವಿ, ಭೂದೇವಿ ಸಹಿತ ತಿರುಪತಿ ವೆಂಕಟೇಶ್ವರ ದೇವರ ಆಗಮನವಾಯಿತು. ತಿರುಪತಿ ಅರ್ಚಕರಾದ ಸುಜಯ ಕೃಷ್ಣಾಚಾರ್ಯ, ವಿಜಯಸಿಂಹಾಚಾರ್ಯ, ಹಾಗೂ ಸುರೇಶಾಚಾರ್ಯ ವೇದ ಪಾರಾಯಣ ನಡೆಸಿದರು. ವೀಣಾ ಪ್ರಸನ್ನ ಶ್ಯಾನುಭಾಗ್, ಚೈತ್ರಾ ಹಾಗೂ ಸಮಿತ ದೇವರ ಕೀರ್ತನೆ ಹಾಡಿದರು. ಪ್ರಸನ್ನ ಶ್ಯಾನುಭಾಗ ಅವರ ನೇತೃತ್ವದಲ್ಲಿ ಸಂಕಲ್ಪ ಪ್ರಾರ್ಥನೆ ನಡೆಯಿತು. ಹಿರಿಯರಾದ ಡಾ.ಕೆ.ಕೆ.ಶ್ಯಾನುಭಾಗ್-ವಿಜಯಲಕ್ಷ್ಮೀ ಶ್ಯಾನುಭಾಗ್ ದೇವರಿಗೆ ಅರ್ಘ್ಯ ಪ್ರಧಾನ ನಡೆಸಿದರು. ಮದೂರು ಸಿದ್ಧಿವಿನಾಯಕ ದೇವಸ್ಥಾನ, ಅಂತೆಯೇ ಪರಿಸರದ ಶ್ರೀಶೈಲ ಮಂದಿರ, ಶೇಷವಣ ಸುಬ್ರಹ್ಮಣ್ಯ ದೇವಸ್ಥಾನ ಶಿವಮಂಗಲ ಸದಾಶಿವ ದೇವಸ್ಥಾನ, ಬಜಕೂಡ್ಲು ಮಹಾಲಿಂಗೇಶ್ವರ ದೇವಸ್ಥಾನ, ಮೂಡಲಾಡ ದೇವಸ್ಥಾನದ ಅರ್ಚಕ-ಪ್ರತಿನಿಧಿಗಳು ಭಾಗವಹಿಸಿದರು. ಅನಂತರ ಪ್ರಸಾದ, ಫಲಹಾರ ವಿತರಣೆ ನಡೆಯಿತು.


ಕಾಸರಗೋಡಿನ ಬಳಿಯ ಕಾಟುಕುಕ್ಕೆ ಸುಬ್ರಾಯ ದೇವಸ್ಥಾನ ಪರಿಸರದಲ್ಲಿ ಆಯೋಜಿಸಿದ ಶ್ರೀನೀವಾಸ ಮಂಗಲೋತ್ಸವ ಕಾರ್ಯಕ್ರಮಕ್ಕೆ ತೆರಳುವ ಸಂದರ್ಭದಲ್ಲಿ ವಿಷ್ಣುಮಂಗಲಕ್ಕೆ ಈ ಭೇಟಿ ನಡೆಯಿತು. ಶಿವಳ್ಳಿ, ಕೋಟ, ಹವ್ಯಕ, ಸ್ಥಾನಿಕ ಬ್ರಾಹ್ಮಣ ಸಮುದಾಯದವರು ಈ ಕಾರ್ಯಕ್ರಮದಲ್ಲಿ ಭಕ್ತಿಯಿಂದ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು. ತಿರುಪತಿ, ಉಡುಪಿ ಮಠ, ಶೃಂಗೇರಿ ಮಠ, ಕುಕ್ಕೆಸುಬ್ರಹ್ಮಣ್ಯ ದೇವಾಲಯಗಳೊಂದಿಗೆ ಕೂಡ್ಲು ಶ್ಯಾನ್‌ಭಾಗ್ ಮನೆತನದ ಪ್ರಾಚೀನ ಕಾಲದ ಅವಿನಭಾವ ಸಂಬಂಧ ಮತ್ತೆ ಮರುಕಳಿಸುತ್ತಿದೆ ಎಂದು ಹಿರಿಯರು ಅಭಿಪ್ರಾಯಪಟ್ಟರು.

## ಕದಂಬೋತ್ಸವದಲ್ಲಿ ನಮ್ಮ ತಂಡ



ಫೆಬ್ರವರಿ 2 ಮತ್ತು 3ನೇ ತಾರೀಕಿನಂದು ಶಿರಸಿಯ ಬನವಾಸಿಯಲ್ಲಿ ನಡೆದ "ಕದಂಬೋತ್ಸವ"ದಲ್ಲಿ ಬ್ರಹ್ಮಾವರದ "ಯಕ್ಷಸಿರಿ" ಮಹಿಳಾ ತಂಡ "ರತ್ನಾವತೀ ಕಲ್ಯಾಣ" ಪ್ರಸಂಗ ನಡೆಸಿಕೊಟ್ಟಿತು. ಧೃಡವರ್ಮನಾಗಿ ಶ್ರೀಮತಿ ಗಾಯತ್ರೀ ಶಾಸ್ತ್ರೀ, ರತ್ನಾವತಿಯಾಗಿ ಕು.ಸಹನಾ, ಭದ್ರಸೇನನಾಗಿ ಶ್ರೀಮತೀ ಭಾಗೀರಥೀ ಎಮ್. ವಿದ್ಯುಲ್ಲೋಚನನಾಗಿ ಶ್ರೀಮತಿ ನಾಗರತ್ನ ಹೇರ್ಳೆ, ವತ್ಸಾಖ್ಯನಾಗಿ ಕು. ಅಶ್ವಿನಿ ಇವರುಗಳು ಪಾತ್ರಗಳನ್ನು ನಿರ್ವಹಿಸಿದ್ದರು. ನೆರೆದ ಗಣ್ಯರು ಮತ್ತು ಪ್ರೇಕ್ಷಕರು ಶುಭ ಹಾರೈಸಿದರು.

## ಕೂಡ್ಲು ವಿಷ್ಣುಮಂಗಲದಲ್ಲಿ ವಾರ್ಷಿಕ ಮಕರಸಂಕ್ರಮಣದ ಉತ್ಸವ



ಕೂಡ್ಲು ವಿಷ್ಣುಮಂಗಲದಲ್ಲಿ ಮಕರಸಂಕ್ರಮಣದ ಉತ್ಸವವು ಅನುವಂಶಿಕ ಮೋಕ್ತಸರ ಕೆ.ಜಿ.ಶ್ಯಾನ್‌ಭಾಗರವರು ನೇತೃತ್ವದಲ್ಲಿ ಬೇಕಲ ಬಳಿಯ ಅರವತ ಮನೆತನದ ತಂತ್ರಿಯವರ ಮಾರ್ಗದರ್ಶನದಲ್ಲಿ ಜರುಗಿತು. ಅರ್ಚಕರಾದ ಚಂದ್ರಶೇಖರ ನಾವಡ ಬಜಕೂಡ್ಲು, ಹರಿನಾರಾಯಣ ಮಯ್ಯ ಕುಂಬ್ಳೆ , ಪ್ರಸನ್ನ ಶ್ಯಾನ್‌ಭಾಗ ಕೂಡ್ಲು ಸಹಕರಿಸಿದರು. ಅನ್ನದಾನ ಮಹಾಪೂಜೆ, ದರ್ಶನ ಬಲಿ, ರಾಜಾಂಗಣ ಪ್ರಸಾದ ಕಾರ್ಯಕ್ರಮ, ಮರುದಿನ ಧೂಮಾವತಿ ದೈವದ ನೇಮ, ಹಾಗೂ ಗುಳಿಗ ಕೋಲ ಇತ್ಯಾದಿ ಕಾರ್ಯಕ್ರಮಗಳೊಂದಿಗೆ ಉತ್ಸವ ಸಂಪನ್ನಗೊಂಡಿತು.

## ಉತ್ತರಾಖಂಡ ರಾಜ್ಯದಲ್ಲಿ ಮಹಿಷಾಸುರಮರ್ದಿನಿಯಾಗಿ ಸವಿತಾ ಎರ್ಮಾಳ್



ಮಾನ್ಯ ಪ್ರಧಾನಮಂತ್ರಿಯವರ ಏಕ್ ಭಾರತ್ ಶ್ರೇಷ್ಠ ಭಾರತ್ ಎಂಬ ಯೋಜನೆಯಡಿ ಉತ್ತರಾಖಂಡ ರಾಜ್ಯದ ಪ್ರವಾಸಕ್ಕೆ ಆಯ್ಕೆಯಾದ ಬ್ರಹ್ಮಾವರ ಸರಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕಿಯಾದ ಬಾರಕೂರಿನ ಕುಮಾರಸ್ವಾಮಿ ಬಿ.ಆರ್. ಇವರ ಪತ್ನಿ ಶ್ರೀಮತಿ ಸವಿತಾ ಎರ್ಮಾಳ್ ತನ್ನ ಕಾಲೇಜಿನಿಂದ ಆಯ್ಕೆಯಾಗಿದ್ದ ಮೂವರು ವಿದ್ಯಾರ್ಥಿಗಳ ಜತೆಗೂಡಿ ಮಹಿಷಾಸುರ ಮರ್ದಿನಿ ಎಂಬ ಯಕ್ಷಗಾನವನ್ನು ಪ್ರದರ್ಶಿಸಿ ಉತ್ತರಾಖಂಡದ ಪ್ರಶಂಸೆಗೆ ಪಾತ್ರರಾದರು. ಸವಿತಾ ಎರ್ಮಾಳ್ ಇವರು ದೇವಿಯ ಪಾತ್ರ ನಿರ್ವಹಿಸಿದ್ದು, ಪ್ರೇಕ್ಷಕರು ಮೂಕವಿಸ್ಮಿತರಾದರು.

ಯಕ್ಷಗಾನದ ಬಣ್ಣಗಾರಿಕೆ ಮತ್ತು ವಸ್ತ್ರವಿನ್ಯಾಸ ವನ್ನು ತಾವೇ ಅಭ್ಯಸಿಸಿ, ಉತ್ತರಾಖಂಡದಲ್ಲಿ ತಮಗೆ ತಾವೇ ಯಕ್ಷಗಾನ ಪಾತ್ರದಲ್ಲಿ ತಯಾರಾದುದು ಸಾಧನೆಯೇ ಸರಿ.

ಮಾಲಿನಿಯ ಪಾತ್ರದಲ್ಲಿ ಶೋಭಿತ ಪೂಜಾರಿ, ಮಹಿಷಾಸುರನಾಗಿ ಅಭಿಷೇಕ ಶೆಟ್ಟಿ, ಇಂದ್ರನಾಗಿ ಸುಶಾಂತ್ ಉತ್ತಮವಾಗಿ ಪ್ರದರ್ಶನ ನೀಡಿದರು. ಸವಿತಾ ಎರ್ಮಾಳ್ ಇವರ ಮಗಳಾದ ನಮನ ಬಿ.ಕೆ. ವಿಷ್ಣುವಿನ ಪಾತ್ರದಲ್ಲಿ ಮಿಂಚಿದಳು.

ಸಾಂಸ್ಕೃತಿಕ ವಿನಿಮಯದ ಉದ್ದೇಶದ ಈ ಪ್ರವಾಸದಲ್ಲಿ ಸವಿತಾ ಎರ್ಮಾಳ್ ಮತ್ತು ಅವರ ತಂಡ ಉತ್ತರಾಖಂಡ ರಾಜ್ಯದ ನೃತ್ಯ, ಹಾಡು ಕಲಿತು ಪ್ರದರ್ಶಿಸಿದರು. ಸವಿತಾ ಎರ್ಮಾಳ್ ಇವರು ಉತ್ತರಾಖಂಡದ ಗಡವಾಲಿ ಭಾಷೆಯಲ್ಲಿ ತನ್ನ ಅನಿಸಿಕೆ ವ್ಯಕ್ತಪಡಿಸಿ ಭಾಷಣ ಮಾಡಿ ಉತ್ತರಾಖಂಡದ ಜನರ ಮನಗೆದ್ದು, ಸಾಂಸ್ಕೃತಿಕ ರಾಯಭಾರಿಯೆನಿಸಿದರು. ಉತ್ತರಾಖಂಡದ ಮುಖ್ಯಮಂತ್ರಿಯಾದ ಶ್ರೀ ತ್ರಿವೇಂದ್ರ ಸಿಂಗ್ ರಾವತ್ ಮತ್ತು ಶಿಕ್ಷಣ ಮಂತ್ರಿಯಾದ ಅರವಿಂದ ಪಾಂಡೆ ಮತ್ತು ಇತರ ಅಧಿಕಾರಿ ವೃಂದದವರು ಇವರ ಕಾರ್ಯಕ್ರಮವನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿ ಶುಭಹಾರೈಸಿದರು. ಇದೊಂದು ಅಪೂರ್ವ ಅನುಭವ ಎನ್ನುತ್ತಾರೆ ಸವಿತಾ ಎರ್ಮಾಳ್.

## ಹರಿದಾಸ ಶ್ರೀ ಮ.ನಾ ಹೆಬ್ಬಾರರಿಗೆ ಸಮ್ಮಾನ



ಕುಂದಾಪುರ ತಾಲೂಕು ಕಂಬದಕೋಣೆಯಲ್ಲಿ ಜರಗಿದ ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ದಿನಾಂಕ 14-01-2018ರಂದು ಸಂಜೆ ನಿವೃತ್ತ ಉಪನ್ಯಾಸಕ, ಹರಿದಾಸ ಶ್ರೀ ಮ.ನಾ. ಹೆಬ್ಬಾರರನ್ನು ಸಾಹಿತ್ಯ ಪರಿಷತ್ತು ವತಿಯಿಂದ ಶಾಲು, ನೆನಪಿನ ಕಾಣಿಕೆ, ಹಣ್ಣು ಹಂಪಲುಗಳನ್ನಿತ್ತು ಸಮ್ಮಾನಿಸಲಾಯಿತು. ತನಗಿತ್ತ ಸಮ್ಮಾನಕ್ಕೆ ಉತ್ತರವಾಗಿ ಮಾತನಾಡುತ್ತಾ ಶ್ರೀ ಹೆಬ್ಬಾರರು ಪ್ರತಿಭಾನಾಂ ಕಾವ್ಯವಿದ್ಯಾಪ್ರಚಯ ಪರಿಚಯಂ, ವೃದ್ಧ ಸೇವಾನುರಾಗಂ, ಸತತಾಭ್ಯಾಸ ಪ್ರಯತ್ನಂ, ಕವಿತೆಗೆ ನಿಯತಂ ಕಾರಣಂ ಎನ್ನುತ್ತಾ, ನಿರಂತರವಾಗಿ ಸಾಹಿತ್ಯವನ್ನು ಓದುವ ಹವ್ಯಾಸವು ಸಾಹಿತ್ಯ ಪ್ರೇಮಿಗಳಲ್ಲಿ ಇರಬೇಕು ಎಂದು ಹೇಳಿದರು.

## ರಾಷ್ಟ್ರೀಯ ಬೊಂಬೆಯಾಟ ಉತ್ಸವದಲ್ಲಿ ಕಾಸರಗೋಡಿನ ಬೊಂಬೆಗಳು



ಅರಬೀ ಸಮುದ್ರದ ರಾಣಿಯೆಂದೇ ಖ್ಯಾತಿವೆತ್ತ ಕೇರಳದ ಸಾಂಸ್ಕೃತಿಕ ನಗರಿ ಕೊಚ್ಚಿಯಲ್ಲಿ ತೆಂಕುತಿಟ್ಟು ಯಕ್ಷಗಾನ ಬೊಂಬೆಯಾಟ ಜನಮೆಚ್ಚುಗೆ ಗಳಿಸಿದೆ. ಭಾರತ ಸರಕಾರದ ಸಂಸ್ಕೃತಿ ಸಚಿವಾಲಯದ ಅಧೀನದಲ್ಲಿರುವ ಕೇಂದ್ರ ಸಂಗೀತ ನಾಟಕ ಅಕಾಡೆಮಿ ವತಿಯಿಂದ ನಡೆದ 'ಪುತುಲ್ ಯಾತ್ರಾ–ಕೇರಳ' ರಾಷ್ಟ್ರೀಯ ಬೊಂಬೆಯಾಟ ಉತ್ಸವದಲ್ಲಿ ಕಾಸರಗೋಡಿನ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ ಪ್ರಸ್ತುತಪಡಿಸಿದ 'ನರಕಾಸುರ ವಧೆ' ಪ್ರಸಂಗದ ಬೊಂಬೆಯಾಟ ನೆರೆದ ಬೃಹತ್ ಜನಸ್ತೋಮವನ್ನು ರಂಜಿಸಿತಲ್ಲದೆ ಯಕ್ಷಗಾನದ ಅಭಿಮಾನಿಗಳನ್ನು ಹೆಚ್ಚಿಸಿದೆ. ಕೇರಳದಲ್ಲಿ ಪ್ರಥಮ ಬಾರಿ ನಡೆದ ಈ ಉತ್ಸವಕ್ಕೆ ಕೇರಳ ಫೈನ್ ಆರ್ಟ್ಸ್ ಸೊಸೈಟಿ ಪೂರ್ಣ ಸಹಕಾರ ನೀಡಿತ್ತು. ಕೆ.ವಿ.ರಮೇಶ ನಿರ್ದೇಶಕರಾಗಿ ಮತ್ತು ಪ್ರಧಾನ ಸೂತ್ರಧಾರರಾಗಿರುವ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘದಲ್ಲಿ ಸೂತ್ರಧಾರರಾಗಿ ಡಾ। ಓಂಪ್ರಕಾಶ್., ಕೆ.ವಿ. ಶ್ರೀವತ್ಸ, ತಿರುವಲೇಶ್ ಕೆ.ವಿ., ಸುದರ್ಶನ ಕೆ.ವಿ., ಗೀತಾ ಕೆ., ಅನೀಶ್ ಪಿ., ದೀಕ್ಷಾ ಭಾಗವಹಿಸಿದ್ದರು. ಕೇರಳ, ತಮಿಳ್ನಾಡು, ಅಸ್ಸಾಂ ಪಶ್ಚಿಮ ಬಂಗಾಳ, ಗುಜರಾತ್, ತ್ರಿಪುರ, ರಾಜಸ್ಥಾನ, ಮಹಾರಾಷ್ಟ್ರ ಮೊದಲಾದೆಡೆಗಳ ಬೊಂಬೆಯಾಟ ತಂಡಗಳು ರಾಷ್ಟ್ರೀಯ ಬೊಂಬೆಯಾಟ ಉತ್ಸವದಲ್ಲಿ ಪ್ರದರ್ಶನ ನೀಡಿದ್ದುವು.

ಕೇರಳ ಫೈನ್ ಆರ್ಟ್ಸ್ ಸೊಸೈಟಿ ಅಧ್ಯಕ್ಷ ಸುಕುಮಾರನ್ ಅವರು ಕಲಾವಿದರನ್ನು ಗೌರವಿಸಿದರು. ಸೊಸೈಟಿಯ ರಾಜ್ಯ ಸಂಘಟಕ ಹಾಗೂ ಅಂತಾರಾಷ್ಟ್ರೀಯ ಮಟ್ಟದ ತೊಗಲು ಬೊಂಬೆಯಾಟ ಕಲಾವಿದ ರಾಮಚಂದ್ರ ಪುಲವರ್, ರಾಜ್ಯ ಸಂಯೋಜಕ ರಾಜೀವ್ ಪುಲವರ್, ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಬೊಂಬೆಯಾಟ ಕಲಾ ವಿಭಾಗದ ಸಂಯೋಜಕಿ ಶುಭಾ ಸಕ್ಸೇನ ಅಭಿನಂದಿಸಿದರು. ಹಲವಾರು ಅಂತಾ ರಾಷ್ಟ್ರೀಯ ಉತ್ಸವಗಳಲ್ಲಿ ಪಾಲ್ಗೊಂಡು ಪ್ರತಿಷ್ಠಿತ ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದುಕೊಂಡಿರುವ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಉತ್ಸವದಲ್ಲಿ ಕಳೆದ ಐದಾರು ವರ್ಷಗಳಿಂದ ಭಾಗವಹಿಸುತ್ತಿದೆ.

## ವಾರ್ಷಿಕ ಮಹೋತ್ಸವ

ಮುಲ್ಲಡ್ಕ ಮುಂಡ್ಕೂರು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ವಾರ್ಷಿಕ ಮಹೋತ್ಸವವು ತಾ.26-01-2018ನೇ ಶುಕ್ರವಾರ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನೆರವೇರಿತು. ಶ್ರೀ ದೇವಳದ ಆಡಳಿತ ಮೊಕ್ತೇಸರ ಶ್ರೀ ಬಿ.ವಿ.ರಾವ್‌ರವರ ನೇತೃತ್ವದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಿದವು. ಮಧ್ಯಾಹ್ನ ಅನ್ನಸಂತರ್ಪಣೆಯಲ್ಲಿ ಸುಮಾರು ಐನೂರು ಜನ ಭಾಗಿಗಳಾಗಿ ಪ್ರಸಾದಭೋಜನ ಸ್ವೀಕರಿಸಿದರು.



## ರ್‍ಯಾಂಕ್ ವಿದ್ಯಾರ್ಥಿನಿ

ಮಂಗಳೂರು ವಿಶ್ವವಿದ್ಯಾನಿಲಯವು ನಡೆಸಿದ ಎಂ.ಎಸ್ಸಿ ಫುಡ್ ಸಾಯನ್ಸ್ ಮತ್ತು ನ್ಯೂಟ್ರೀಶಿಯನ್ ವಿಭಾಗದ ಪರೀಕ್ಷೆಯಲ್ಲಿ ಮೂಡುಬಿದ್ರಿ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಕಾವ್ಯಾ ರಾವ್ ಇವರು ದ್ವಿತೀಯ ರ್‍ಯಾಂಕ್ ಗಳಿಸಿರುತ್ತಾರೆ. ಇವರು ಕುಕ್ಕಿಕಟ್ಟೆಯಲ್ಲಿರುವ ನಂದಳಿಕೆ ಉಮೇಶ್ ರಾವ್ ಮತ್ತು ಕವಿತಾರವರ ಪುತ್ರಿ. ಕುಮಾರಿ ಕಾವ್ಯಾ ರಾವ್‌ರವರಿಗೆ ಅಭಿನಂದನೆಗಳು.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ) ಮಂಗಳೂರು 108ನೇ ವರ್ಷದ ಮಹಾಸಭೆ



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕೋತ್ಸವದ ಕಾರ್ಯಕ್ರಮಗಳು ತಾ.17-12-2017ರ ರವಿವಾರದಂದು ಬೆಳಿಗ್ಗೆ ಸಾಮೂಹಿಕ ಪಾರಾಯಣದೊಂದಿಗೆ ಆರಂಭ ಗೊಂಡವು. ಬಳಿಕ ಶ್ರೀ ಸತ್ಯನಾರಾಯಣ ಪೂಜೆಯ ಸಂಕಲ್ಪ ನೆರವೇರಿತು. ಸಿಹಿ ಹಾಗೂ ಖಾರ ತಿಂಡಿಗಳ ಅಡುಗೆ ಸ್ಪರ್ಧೆ ಮುಕ್ತ ವಿಭಾಗದಲ್ಲಿ ಕೆಳಗಿನ ಸಭಾಂಗಣದಲ್ಲಿ ನೆರವೇರಿತು. ಮುಂದೆ ಜಾನಪದ ಗೀತೆ, ಭಾವ ಗೀತೆ ಸ್ಪರ್ಧೆಗಳು ನಡೆದವು. 11.30ಕ್ಕೆ ಮಹಾಸಭೆ ಆರಂಭಗೊಂಡಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಎಂ.ಆರ್.ವಾಸುದೇವ್ ಸದಸ್ಯರನ್ನು ಸ್ವಾಗತಿಸುತ್ತ "ಶ್ರೀ ಸುಬ್ರಹ್ಮಣ್ಯ ಸಭಾ ಸ್ಥಳೀಯವಾಗಿ ಕಾರ್ಯಕ್ರಮಗಳನ್ನು ಉತ್ತಮವಾಗಿ ನಡೆಸುತ್ತಿದ್ದು ಸಭಾದ ಹೊರಗೂ ಸಮಾಜಮುಖಿ ಕಾರ್ಯಕ್ರಮಗಳನ್ನು ಸಂಘಟಿಸುತ್ತಿದ್ದು ಸರ್ವರ ಮೆಚ್ಚುಗೆಗೆ ಪಾತ್ರವಾಗಿದೆ ಎಂದರು. ಈಗಷ್ಟೇ ನಡೆದ ಬಳ್ಪ ತ್ರಿಶೂಲಿನಿ ದೇವಸ್ಥಾನದ ಬ್ರಹ್ಮಕಲಶ ಹಾಗೂ ಸ್ವಚ್ಛ ಭಾರತ್ ಕಾರ್ಯಕ್ರಮಗಳನ್ನು ಅವರು ಉದಾಹರಿಸಿದರು. ಅದಲ್ಲದೆ ಸಭಾದ ಸದಸ್ಯರು ಇತರ ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದು ಶ್ರೀ ಸಭಾವು ಹೆಮ್ಮೆ ಪಡುವಂತೆ ಮಾಡುತ್ತಿದ್ದಾರೆ" ಎಂದರು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ 2016-17ನೇ ವರ್ಷದ ಆಡಳಿತ ಮಂಡಳಿಯ ವರದಿಯನ್ನು ಮಂಡಿಸಿದರು. ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ ರಾವ್ ಪರಿಶೋಧಿತ ಲೆಕ್ಕಪತ್ರ ಮತ್ತು ವರದಿಗಳನ್ನು ವಾಚಿಸಿದರು. ವರದಿಗಳಿಗೆ ಸಭೆಯ ಸದಸ್ಯರು ಸರ್ವಾನುಮತ ದಿಂದ ಮಂಜೂರು ನೀಡಿದರು. ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳನ್ನು ಚರ್ಚಿಸಲಾಯಿತು. ಅಧ್ಯಕ್ಷರ ವಂದನಾರ್ಪಣೆ, ಶ್ರೀ ಸತ್ಯನಾರಾಯಣ ಪೂಜೆಯ ಮಂಗಳಾರತಿ, ಪ್ರಸಾದ ವಿತರಣೆ, ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಯುವವೇದಿಕೆಯ ಶ್ರೀ ಸುರೇಶ್ ಕಡಬ, ಮಹಿಳಾ ವೇದಿಕೆಯ ಶ್ರೀಮತಿ ಶೈಲಜಾ ಶ್ರೀಕಾಂತ್ ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ಐ. ಪಿ. ನಾಗರಾಜ್ ದಂಪತಿಗಳು ಶ್ರೀ ಸತ್ಯನಾರಾಯಣ ಪೂಜೆ ನೆರವೇರಿಸಿದರು. ಅಡುಗೆ ಸ್ಪರ್ಧೆಯ ಬಹುಮಾನಗಳನ್ನು ಶ್ರೀ ಅಶೋಕ ಕುಮಾರ ನಂದಾವರ ಪ್ರಾಯೋಜಿಸಿದ್ದರು.

## ಅಮೆರಿಕಾದಲ್ಲಿ ಸಂಜೆಯ ನಡಿಗೆ
**(Evening Walk)**

ಸಂಜೆಯ ನಡಿಗೆಲಿ
ಸಂತಸ ಅಡಗಿದೆ
ತಂಬೆಲಕಿನ ಸ್ಪರ್ಶವ ಪಡೆದು ॥
ಎದುರಿಹ ಸೂರ್ಯನ
ಹೊಂಬಣ್ಣದ ಕಿರ–
ಣಂಗಳ ಕಾಣುತ ನಡೆನಡೆದು ॥೧॥

ಮುಳುಗುವ ಸೂರ್ಯನ
ಬಿಂಬವು ಚೆನ್ನದ
ತಟ್ಟೆಯ ತೆರದಲಿ ಶೋಭಿಪುದು ॥
ಪಡುವಣ ದಿಕ್ಕಿನ
ಆಗಸವೆಲ್ಲವು
ಕೆಂಬಣ್ಣದಿ ಹೊಳೆಯುತಲಿಹುದು ॥೨॥

ಡಿಲ್ಲಿಯ ಗೆಳೆಯರು
ಪಂಜಾಬಿನ ಸಖ
ಚೆನ್ನೈಯವರಾಗಿಹ ಮಿತ್ರ ॥
ಎಲ್ಲರು ಎನ್ನಯ
ಸುತ್ತಲು ಸೇರುತ
ಆದರು ವಿಶ್ವಾಸಕ್ಕೆ ಪಾತ್ರ ॥೩॥

ವಿಧ ವಿಧ ಭಾಷೆಯ
ವಿಧ ವಿಧ ಸಂಸ್ಕೃತಿ
ವಿಧ ವಿಧ ಪೋಷಾಕಿನ ಜನರು ॥
ಎಲ್ಲರು ಒಟ್ಟಿಗೆ
ಸೇರುತ ಹರಟುತ
ಸುಖಕಷ್ಟವನು ವಿಚಾರಿಪರು ॥೪॥

ಚಂದದ ಭಾರತ
ದಿಂದಲಿ ಬಂದಿಹ
ಜನರೆಲ್ಲರು ನಾವ್ ಸೇರುತಲಿ ॥
ತೆಲುಗರು, ತಮಿಳರು
ಹಿಂದಿ ಭಾಷಿಕರು
ಕನ್ನಡ, ಮಲೆಯಾಳಿಗಳಲ್ಲಿ ॥೫॥

ವಿಧ ವಿಧ ವೃತ್ತಿಯ
ಮಾಡಿ ನಿವೃತ್ತಿಯ
ಪಡೆದವರಿರುತಿಹರಿವರಲ್ಲಿ ॥
ಹಿಂದೂ, ಮುಸ್ಲಿಮ
ಕ್ರೈಸ್ತರೆನ್ನುವ
ಭೇದಭಾವಗಳ ತೋರೆದಿಲ್ಲಿ ॥೬॥

ನಮ್ಮೊಳು ನಾವೇ
ಮಾತನಾಡುತಲಿ
ಚಿಕ್ಕ ವಿಶ್ವವನೆ ಸೃಷ್ಟಿಪೆವು ॥
ಭಾವನೆ ಹಂಚಲು
ಭಾಷೆಯ ತೊಡಕಿನ
ಅಡ್ಡಗೋಡೆಯನು ಮರೆಯುವೆವು ॥೭॥

**–ಹರಿದಾಸ. ಮ.ನಾ. ಹೆಬ್ಬಾರ್**

## ಶುಭ ವಿವಾಹ

ನಂದಳಿಕೆ ಶ್ರೀಮತಿ ಸುಕನ್ಯಾ ಮತ್ತು ಶ್ರೀ ಉದಯಚಂದ್ರ ರಾವ್‌ರ ಪುತ್ರಿ **ಶರಣ್ಯ** ಹಾಗೂ ಕಂಬದಕೋಣೆ ಶ್ರೀಮತಿ ಭಾರತಿ ಮತ್ತು ಶ್ರೀ ಕೆ.ಜಿ ಪರಮೇಶ್ವರ ರಾವ್‌ರ ಪುತ್ರ **ಶಿಶಿರ** ಇವರ ವಿವಾಹವು ತಾ.09.02.2018 ರಂದು ಉಡುಪಿಯ ಶ್ರೀ ಗೋವಿಂದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಶುಭಜನನ

ನಮ್ಮ ಸಂಘದ ಸಲಹೆಗಾರರಾದ ಶ್ರೀ ಯು. ಪ್ರಫುಲ್ಲಚಂದ್ರರಾವ್‌ರ ಪುತ್ರ ಪ್ರತೀಕ್ ಹಾಗೂ ಅರ್ಪಿತಾ ದಂಪತಿಗಳಿಗೆ ತಾ.13–01–2018 ರಂದು ಗಂಡುಮಗುವಿನ ಜನನ.

## ನಾಮಕರಣ

ಮೂಡುಬೆಳ್ಳೆಯ ಶ್ರೀ ಚಂದ್ರಕಾಂತ ಹಾಗೂ ದೀಪಿಕಾ ದಂಪತಿಗಳು ತಮ್ಮ ಪುತ್ರ ಸ್ಕಂದನ ನಾಮಕರಣೋತ್ಸವವನ್ನು ಬೆಳ್ಳೆಯ ತಮ್ಮ ನಿವಾಸದಲ್ಲಿ ತಾ.24–01–2018ರಂದು ನೆರವೇರಿಸಿದರು.

## ನಿಧನ

ಕಟೀಲು ಶ್ರೀ ಅನಂತರಾಜರಾವ್‌ರ ಪತ್ನಿ ಶ್ರೀಮತಿ ಪ್ರೇಮಾರಾವ್ ರವರು 12.01.2018 ರಂದು ನಿಧನ ಹೊಂದಿದರು.

## ವಿಳಾಸ ಬದಲಾವಣೆ

**ವಾಸುದೇವ ರಾವ್**
''ಮನಸ್ವಿ''
ಬಾರಾಳಿ ಮಹಾಗಣಪತಿ ದೇವಸ್ಥಾನದ ರಸ್ತೆ,
ಹೆಗ್ಗುಂಜೆ ಗ್ರಾಮ, ಮಂದರ್ತಿ ಅಂಚೆ,
ಉಡುಪಿ ತಾಲೂಕು.

★★★★ ★★★★

**ಶ್ರೀ ಶಂಕರನಾರಾಯಣ ರಾವ್ ಕೆ.**
ಫ್ಲ್ಯಾಟ್ ನಂ.101, ಮೊದಲನೇ ಮಹಡಿ,
ಪ್ರೆಸ್ಟೀಜ್ ಸುಕ್ರಿ ಸೆರೆನಿಟಿ ಅಪಾರ್ಟ್‌ಮೆಂಟ್,
ನಂ.38/1, ಕನಕಪುರ ರಸ್ತೆ,
ಕೃಷ್ಣರಾವ್ ಪಾರ್ಕ್ ಎದುರು, ಬಸವನಗುಡಿ,
ಬೆಂಗಳೂರು–560004.
ಮೊಬೈಲ್ : 9449958151

॥ ಓಂ ನಮಃ ಶಿವಾಯ ॥

## ಶ್ರೀ ಸದಾಶಿವ ದೇವಸ್ಥಾನ, ಕೂಡಬೆಟ್ಟು

ಮಿತ್ತಬಾಗಿಲು ಗ್ರಾಮ, ಅಂಚೆ: ಕಿಲ್ಲೂರು–574214, ಬೆಳ್ತಂಗಡಿ ತಾಲೂಕು, ದ.ಕ.

ಆತ್ಮೀಯರೆ,

ಸ್ವಸ್ತಿ! ಶ್ರೀ ಹೇಮಲಂಬಿ ನಾಮ ಸಂವತ್ಸರದ ಫಾಲ್ಗುಣ ಕೃಷ್ಣ ೬ ತಾರೀಕು 07–03–2018 ನೇ ಬುಧವಾರದಂದು

ಶ್ರೀ ದೇವರ

**ಪ್ರತಿಷ್ಠಾ ವರ್ಧಂತಿ**

ಕಾರ್ಯಕ್ರಮವು ಜರಗಲಿರುವುದು.

ಆ ಪ್ರಯುಕ್ತ ತಾವೆಲ್ಲರೂ ಭಾಗವಹಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ

**– ಬಿ.ಕೆ. ಧನಂಜಯ ರಾವ್**
ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ, ಶ್ರೀ ಸದಾಶಿವ ದೇವಸ್ಥಾನ, ಕೂಡಬೆಟ್ಟು

**–: ಕಾರ್ಯಕ್ರಮಗಳ ವಿವರ :–**

ಪೂರ್ವಾಹ್ನ ಗಂಟೆ 10.00 – ಪಂಚಾಮೃತಾಭಿಷೇಕ, ರುದ್ರಾಭಿಷೇಕ ; ಗಂಟೆ 11.00 – ಸಭಾ ಕಾರ್ಯಕ್ರಮ, ಧಾರ್ಮಿಕ ಉಪನ್ಯಾಸ ; ಮಧ್ಯಾಹ್ನ ಗಂಟೆ 12.00 – ಮಹಾಪೂಜೆ, ಪ್ರಸಾದ ವಿತರಣೆ ; ಗಂಟೆ 1.00 – ಅನ್ನಸಂತರ್ಪಣೆ

## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

**ಅಂಚೆ: ಕೋಡಿಂಬಾಡಿ-574325, ಪುತ್ತೂರು ತಾಲೂಕು, ದ.ಕ.**

ಆತ್ಮೀಯ ಸಮಾಜಬಾಂಧವರೇ,

ಸ್ವಸ್ತಿ। ಶ್ರೀ ಹೇಮಲಂಬಿ ಸಂ।ದ ಫಾಲ್ಗುಣ ಮಾಸದ ಪೌರ್ಣಮಿತಿಥಿ
**ದಿನಾಂಕ 01-03-2018ನೇ ಗುರುವಾರ ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವರ**

**ವಾರ್ಷಿಕ ಪ್ರತಿಷ್ಠಾ ಮಹೋತ್ಸವ ಮತ್ತು ಜಾತ್ರೋತ್ಸವವು**

ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಜರಗಲಿದೆ.

ಈ ದೇವತಾ ಕಾರ್ಯಕ್ರಮಗಳಿಗೆ ಭಕ್ತಾಭಿಮಾನಿಗಳಾದ ತಾವೆಲ್ಲರೂ ಶ್ರೀ ಕ್ಷೇತ್ರಕ್ಕೆ ಆಗಮಿಸಿ ತನುಮನ ಧನಗಳೊಂದಿಗೆ ಸಹಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

| | | |
|---|---|---|
| **ಯಂ.ನಾಗೇಶ ಶರ್ಮ** | **ಅಧ್ಯಕ್ಷರು** | **ಟಿ. ಅಣ್ಣಯ್ಯ ತೆಂಕಿಲ** |
| ಅರ್ಚಕರು/ಕಾರ್ಯದರ್ಶಿ | **ಮತ್ತು ಸದಸ್ಯರು** | ಅಧ್ಯಕ್ಷರು ಮತ್ತು ಸದಸ್ಯರು |
| ಮೊ : 9901247080 | ಜೀರ್ಣೋದ್ಧಾರ ಸಮಿತಿ. | ಆಡಳಿತ ಮಂಡಳಿ |

॥ಶ್ರೀ ದುರ್ಗಾಪರಮೇಶ್ವರಿ ಪ್ರಸನ್ನ॥

## ಕಟೀಲು ಶ್ರೀ ದುರ್ಗಾಪರಮೇಶ್ವರೀ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿ ಇವರು

**ತಾ.28–02–2018 ನೇ ಬುಧವಾರ ರಾತ್ರಿ 8.30ಕ್ಕೆ ಕುಂತಲನಗರ "ದಿವ್ಯಾದೀಪಾ" ಮನೆಯ ವಠಾರದಲ್ಲಿ**

**"ಶ್ರೀ ದೇವಿ ಮಹಾತ್ಮೆ"**

**ಎಂಬ ಪುಣ್ಯಕಥಾ ಭಾಗವನ್ನು ಯಕ್ಷಗಾನ ಬಯಲಾಟವಾಗಿ ಆಡಿತೋರಿಸಲಿರುವರು.**

ಆ ಪ್ರಯುಕ್ತ ರಾತ್ರಿ ಗಂಟೆ 9.00ಕ್ಕೆ ಚೌಕಿಯಲ್ಲಿ ಸಂಪನ್ನಗೊಳ್ಳಲಿರುವ ದೇವರ ಪೂಜೆ ಹಾಗೂ ಬಳಿಕ ನಡೆಯುವ "ಅನ್ನ ಸಂತರ್ಪಣೆ"ಯಲ್ಲಿ ಭಾಗವಹಿಸಿ ಯಕ್ಷಗಾನವನ್ನು ವೀಕ್ಷಿಸಿ ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಶ್ರೀಮತಿ ನಳಿನಾಕ್ಷಿ ಮತ್ತು ಶ್ರೀ ಮೋಹನ ರಾವ್**
**ಮತ್ತು ಮನೆಯವರು, ಕುಂತಲನಗರ ಮೂಡುಬೆಳ್ಳೆ.**

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ
ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ತಾ.05-03-2018 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.10-03-2018 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.20-02-2018 ಮತ್ತು ತಾ.06-03-2018 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.
–ಸಂಪಾದಕ ಮಂಡಳಿ



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

# ಶ್ರೀ ಕಲಾ ಸಂಗಮ ಚಾರಿಟೇಬಲ್ ಟ್ರಸ್ಟ್ (ರಿ) ಮತ್ತು ಶ್ರೀ ಕಲಾ ಸಂಗಮ ಯಕ್ಷಗಾನ ಮಕ್ಕಳ ಮೇಳ ಮುಚ್ಲುಕೋಡು ಕುಕ್ಕಿಕಟ್ಟೆ ಇದರ “ಪ್ರಥಮ ಸಂಭ್ರಮ”

ಶ್ರೀ ಕಲಾ ಸಂಗಮ ಯಕ್ಷಗಾನ ಮಕ್ಕಳ ಮೇಳವು ಮಕ್ಕಳಿಗೆ ಯಕ್ಷಕಲೆಯನ್ನು ಕಲಿಸಿ ಈ ಕಲಾಪ್ರಾಕಾರವನ್ನು ಪ್ರೋತ್ಸಾಹಿಸಿ ಉಳಿಸಿ ಬೆಳೆಸುವ ಉದ್ದೇಶದಿಂದ ಜನ್ಮತಾಳಿದ ಸಂಸ್ಥೆಯಾಗಿದ್ದು ತಾ.30–07–2017ರಂದು ಮುಚ್ಲುಕೋಡು ಶ್ರೀ ಸುಬ್ರಹ್ಮಣ್ಯ ದೇವರ ಅನುಗ್ರಹದೊಂದಿಗೆ, ಶ್ರೀಮತಿ ಶೋಭಾ ರಾಧಾಕೃಷ್ಣರಾವ್ ರವರು ದೀಪ ಬೆಳಗಿಸುವುದರೊಂದಿಗೆ ಉದ್ಘಾಟನೆಗೊಂಡಿತು.

ಈ ಶ್ರೀ ಕಲಾ ಸಂಗಮ ಮಕ್ಕಳ ಮೇಳವು ಕುಕ್ಕಿಕಟ್ಟೆಯಲ್ಲಿರುವ ಶ್ರೀ ಕಲಾ ಕಾಂಪ್ಲೆಕ್ಸ್‌ನ ಮೊದಲ ಮಹಡಿಯಲ್ಲಿರುವ ಸಭಾಂಗಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು. ಪ್ರಸ್ತುತ ಪ್ರತೀ ಶನಿವಾರ ಸಮಯ ಸಂಜೆ 4 ರಿಂದ ಸಂಜೆ 5 ರವರೆಗೆ ನಾಟ್ಯತರಗತಿಯು ನಡೆಯುತ್ತಿದೆ.. ಇದುವರೆಗೆ ಇಲ್ಲಿ ಸುಮಾರು ಐವತ್ತು ಮಂದಿ ವಿದ್ಯಾರ್ಥಿಗಳು ಯಕ್ಷಗಾನ ನಾಟ್ಯ ಕಲಿಯುತ್ತಿದ್ದಾರೆ. ಗುರುಗಳಾಗಿ ಶ್ರೀ ನಿತ್ಯಾನಂದ ಶೆಟ್ಟಿಗಾರ್ ಇವರು ಪ್ರತೀ ಭಾನುವಾರದಂದು ಬೆಳಗ್ಗೆ 10 ಗಂಟೆಯಿಂದ 12 ಗಂಟೆಯವರೆಗೆ ಬಣ್ಣದ ತರಗತಿ ಮತ್ತು ಮಕ್ಕಳ ವೇಷಭೂಷಣಗಳನ್ನು ತಾವೇ ಮಾಡಿಕೊಳ್ಳುವ ತರಬೇತಿ ನೀಡುತ್ತಿದ್ದಾರೆ. ಈ ಎಲ್ಲಾ ತರಗತಿಗಳು ಉಚಿತವಾಗಿ ಟ್ರಸ್ಟ್‌ನ ಮುಖಾಂತರ ನಡೆಯುತ್ತಿದ್ದು. ಯಕ್ಷಗಾನದ ಉಳಿದ ಪ್ರಕಾರಗಳಾದ ಚೆಂಡೆ, ಮದ್ದಳೆ, ಮತ್ತು ಭಾಗವತಿಕೆಯನ್ನು ಏಪ್ರಿಲ್ ತಿಂಗಳಿನಿಂದ ಕಲಿಸಲಾಗುವುದು. ಪ್ರಸ್ತುತ ವರ್ಷದಲ್ಲಿ ಶ್ರೀ ಕಲಾಸಂಗಮ ಮಕ್ಕಳ ಮೇಳದ ಮಕ್ಕಳಿಂದ ಹಲವಾರು ಯಕ್ಷಗಾನ ಕಾರ್ಯಕ್ರಮಗಳು ಜರಗಿವೆ. ತಾ.25–08–2017ರಂದು ಶ್ರೀ ಸಾರ್ವಜನಿಕ ಗಣೇಶೋತ್ಸವ ಸಮಿತಿ ಕುಕ್ಕಿಕಟ್ಟೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ‘ಶಶಿಪ್ರಭಾ ಪರಿಣಯ’ ಎಂಬ ಯಕ್ಷಗಾನ ಪ್ರದರ್ಶನ, ತಾ.24–09–2017ರಂದು ಶ್ರೀ ಜನಾರ್ಧನ ಮತ್ತು ಮಹಾಕಾಳಿ ದೇವಸ್ಥಾನ ಅಂಬಲಪಾಡಿಯ ನವರಾತ್ರಿಯ ಪರ್ವಕಾಲದಲ್ಲಿ ‘ಶಶಿಪ್ರಭಾ ಪರಿಣಯ’ ಯಕ್ಷಗಾನ, ತಾ.09–10–2017ರಂದು ಶ್ರೀ ಕೃಷ್ಣಮಠದ ರಾಜಾಂಗಣದಲ್ಲಿ, ತಾ.26–10–17ರಂದು ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ ಪಾವಂಜೆಯಲ್ಲಿ, ಹಾಗೆಯೇ ತಾ.19–11–2017ರಂದು ದೇವಾಡಿಗರ ಸಭಾಭವನ ಬೀಡಿನಗುಡ್ಡೆ ಇದರ ಪದಾಧಿಕಾರಿಗಳ ಆಗ್ರಹದ ಮೇರೆಗೆ ಐದನೆಯ ಪ್ರದರ್ಶನವೂ ನಡೆದು ಕಲಾಭಿಮಾನಿಗಳ ಹೃದಯವನ್ನು ಗೆದ್ದಿದೆ.

ಈ ಸಂಸ್ಥೆಯು ಒಂದು ವರ್ಷವನ್ನು ಪೂರೈಸಿದ ಸಂತೋಷವನ್ನು "ಪ್ರಥಮ ಸಂಭ್ರಮ" ಎಂಬ ಹೆಸರಿನಲ್ಲಿ ಆಚರಿಸುವ ಉದ್ದೇಶದಿಂದ ಶ್ರೀ ಕಲಾ ಸಂಗಮ ಯಕ್ಷಗಾನ ಮೇಳದ ವಿದ್ಯಾರ್ಥಿಗಳ ಪೋಷಕರ ಸಭೆಯನ್ನು ದಿನಾಂಕ 17–12–2017ರಂದು ಮುಚ್ಲುಕೋಡು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಅಂಗಣದಲ್ಲಿ ಕರೆಯಲಾಯಿತು. ಈ ಸಭೆಯಲ್ಲಿ ಮೇಳದ ವಾರ್ಷಿಕೋತ್ಸವ–ಪ್ರಥಮ ಸಂಭ್ರಮವನ್ನು ದಿನಾಂಕ 14–01–2018ನೇ ಆದಿತ್ಯವಾರ ನಡೆಸುವುದೆಂದು ತೀರ್ಮಾನಿಸಲಾಯಿತು.

ಅಂತೆಯೇ ತಾ.14–01–2018ರಂದು ನಡೆದ ಪ್ರಥಮ ಸಂಭ್ರಮದಲ್ಲಿ ಶ್ರೀಕಲಾಸಂಗಮ ಯಕ್ಷಗಾನ ಮಕ್ಕಳ ಮೇಳದ ಬಾಲ ಕಲಾವಿದರಿಂದ ವೀರಮಣಿಕಾಳಗ ಹಾಗೂ ಉದಯೋನ್ಮುಖ ಕಲಾವಿದರಿಂದ ‘ಪಾಪಣ್ಣ ವಿಜಯ–ಗುಣಸುಂದರಿ ಮತ್ತು ಶ್ರೀ ಬಪ್ಪನಾಡು ದುರ್ಗಾಪರಮೇಶ್ವರೀ ಯಕ್ಷಗಾನ ಮಂಡಳಿ ಮುಲ್ಕಿ ಇವರಿಂದ ‘ಬನತ ಬಂಗಾರ’ ಎಂಬ ತುಳು ಯಕ್ಷಗಾನ ಪ್ರದರ್ಶನಗಳು ಸಂಪನ್ನಗೊಂಡವು.

ಆ ದಿನ ಸಂಜೆ 6.30ರಿಂದ 7.30 ರವರೆಗೆ ನಡೆದ ಸಭಾಕಾರ್ಯಕ್ರಮದಲ್ಲಿ ಶ್ರೀ ನಿ.ಬಿ. ವಿಜಯ ಬಲ್ಲಾಳರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಾಲಿಗ್ರಾಮ ಮೇಳದ ಯಜಮಾನರಾದ ಪಳ್ಳಿ ಶ್ರೀ ಕಿಶನ್ ಹೆಗ್ಡೆ ಮತ್ತು ಬಡಗಿನ ಖ್ಯಾತ ಸ್ತ್ರೀ ವೇಷಧಾರಿ ಶ್ರೀ ಶಶಿಕಾಂತ ಶೆಟ್ಟಿಯವರು ಆಗಮಿಸಿ ತಮ್ಮ ಅನಿಸಿಕೆಗಳನ್ನು ತಿಳಿಸಿದರು. ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಪ್ರಧಾನ ತಂತ್ರಿಗಳಾದ ವೇದಮೂರ್ತಿ ಶ್ರೀ ಕೆ. ರಾಮಕೃಷ್ಣ ತಂತ್ರಿಗಳವರು ಅನುಗ್ರಹ ಭಾಷಣ ಮಾಡಿದರು ವೇದಿಕೆಯಲ್ಲಿ ಶ್ರೀ ಕಲಾಸಂಗಮ ಯಕ್ಷಗಾನ ಮಕ್ಕಳಮೇಳದ ಗೌರವ ಅಧ್ಯಕ್ಷರಾದ ಶ್ರೀ ಬಾಲಸುಬ್ರಹ್ಮಣ್ಯ ಹಾಗೂ ಶ್ರೀ ಕಲಾಸಂಗಮ ಚಾರಿಟೇಬಲ್ ಟ್ರಸ್ಟಿನ ಅಧ್ಯಕ್ಷರಾದ ಶ್ರೀ .ಎಲ್. ಗುರುರಾಜ್ ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಗಳನ್ನು ಮಕ್ಕಳ ಮೇಳದ ವಿದ್ಯಾಥಿಗಳ ಪೋಷಕರೇ ನಿರ್ವಹಿಸಿದ್ದು ಆ ಕಾರ್ಯಕ್ರಮದ ವಿಶೇಷವಾಗಿತ್ತು ಶ್ರೀಮತಿ ಪ್ರಮೀಳಾ ರಾಮಶೆಟ್ಟಿಗಾರ್ ಇಂದಿರಾನಗರ ರವರು ಕಾರ್ಯಕ್ರಮವನ್ನು ನಿರೂಪಿಸಿ. ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಎಲ್. ಗುರುರಾಜ್ ಸ್ವಾಗತ ಭಾಷಣವನ್ನು ನೆರವೇರಿಸಿದರು. ಗಣ್ಯರಾದ ಶ್ರೀ ನಿ.ಬಿ. ವಿಜಯ ಬಲ್ಲಾಳರಿಗೆ ಟ್ರಸ್ಟಿನ ಸ್ಥಾಪಕರಾದ ಮತ್ತು ಮಕ್ಕಳ ಮೇಳದ ರೂವಾರಿಯವರಾದ ಶ್ರೀ ಸುರೇಶ್ (ಪುಟ್ಟ) ಪುಷ್ಪವನ್ನು ನೀಡಿದರು. ದಿನಾಂಕ 30–04–2017 ರಿಂದ 17–12–2017 ರ ವರೆಗಿನ ವರದಿ ಮತ್ತು ಖರ್ಚು ವೆಚ್ಚಗಳನ್ನು ಶ್ರೀ ಕಲಾಸಂಗಮ ಚಾರಿಟೇಬಲ್ ಟ್ರಸ್ಟ್‌ನ ಕೋಶಾಧಿಕಾರಿಯಾದ ಅರುಣ್ ಕುಮಾರ್ ವಾಚಿಸಿದರು. ಮಕ್ಕಳ ಮೇಳದ ನಾಟ್ಯ ಗುರುಗಳಾದ ಶ್ರೀ ನಿತ್ಯಾನಂದ ಶೆಟ್ಟಿಗಾರ್ ದಂಪತಿಗಳನ್ನು ಮತ್ತು ಬಣ್ಣದ ತರಗತಿಯ ಗುರುಗಳಾದ ಶ್ರೀ ಗಂಗಣ್ಣ ಶೆಟ್ಟಿಗಾರ್ ಇವರನ್ನು ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರೆಲ್ಲರು ಸೇರಿ ಸನ್ಮಾಸಿಸಿದರು.


ಮುಖ್ಯ ಅತಿಥಿಗಳಾದ ಶ್ರೀ ಶಶಿಕಾಂತ್ ಶೆಟ್ಟಿ ಕಾರ್ಕಳ ಇವರು ಬಡಗಿನ ಪ್ರಖ್ಯಾತ ಸ್ತ್ರೀ ವೇಷಧಾರಿ. ಇವರು ಪ್ರಸಕ ಸಾಲಿನಲ್ಲಿ ಸಾಲಿಗ್ರಾಮ ಮೇಳದ ತಿರುಗಾಟದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ತಮ್ಮ ಭಾಷಣದಲ್ಲಿ ಯಕ್ಷಗಾನದ ಮಕ್ಕಳ ಪೋಷಕರಿಗೆ ಕಿವಿಮಾತೊಂದನ್ನು ಹೇಳಿದರು. ಅದೇನೆಂದರೆ “ಯಾವುದೇ ಕಲಾವಿದ ಈಗಿನ ಕಾಲ ಘಟ್ಟದಲ್ಲಿ ಬಡವನಲ್ಲ. ಎಲ್ಲಾ ರೀತಿಯ ಸೌಕರ್ಯಗಳೂ ಕಲಾವಿದನಿಗೆ ಸಿಗುತ್ತಲಿದೆ. ಹಾಗೂ ಕಲೆಯ ಕಲಿಕೆಯಿಂದ ಯಾವ ಮಕ್ಕಳೂ ಹಾಳಾಗಲಾರದು. ಯಕ್ಷಗಾನ ದಿಂದಲೂ ಯಾರೂ ಹಾಳಾಗುವುದಿಲ್ಲ. ನನ್ನ ಸ್ನೇಹಿತನ ಮಗನೊಬ್ಬ ಯಕ್ಷಗಾನ ಕಲಿಯುತ್ತಾ ದ್ವಿತೀಯ ಪಿ.ಯು ಪರೀಕ್ಷೆಯಲ್ಲಿ ಶೇಕಡಾ 90ಕ್ಕೂ ಮೇಲ್ಪಟ್ಟು ಅಂಕಗಳಿಸಿದ್ದಾರೆ” ಎಂದು ತಿಳಿಸಿದರು. ಇನ್ನೋರ್ವ ಮುಖ್ಯ ಅತಿಥಿಗಳಾದ ಕಿಶನ್ ಹೆಗ್ಡೆಯವರು ‘ಮಕ್ಕಳ ಮೇಳದಿಂದ ಕಲಿತು ತಯಾರಾದ ಐವತ್ತು ಕಲಾವಿದರಲ್ಲಿ ಮುಂದೊಂದು ದಿನ ಒಂದಿಬ್ಬರು ಕಲಾವಿದರಾದರೂ ನಮ್ಮ ಸಾಲಿಗ್ರಾಮ ಮೇಳಕ್ಕೆ ಸಿಗಬಹುದು’ ಎಂಬ ಆಸೆಯನ್ನು ವ್ಯಕ್ತಪಡಿಸಿದರು. ಅಧ್ಯಕ್ಷರಾದ ಶ್ರೀ ನಿಡಂಬೂರು ಬೀಡು ವಿಜಯ ಬಲ್ಲಾಳರು ತಮ್ಮ ಮತ್ತು ಶ್ರೀಮತಿ ಮತ್ತು ಶ್ರೀ ರಾಧಾಕೃಷ್ಣರಾವ್ ಇವರೆ ಬಾಂಧವ್ಯ ಯಾವ ರೀತಿಯದ್ದು ಎಂಬುದನ್ನು ತಿಳಿಸಿದರು. ಮುಚ್ಲುಕೋಡು ಶ್ರೀ ಸುಬ್ರಹ್ಮಣ್ಯ ದೇವರ ಪ್ರಧಾನ ತಂತ್ರಿಗಳಾದ ಶ್ರೀ ರಾಮಕೃಷ್ಣ ತಂತ್ರಿಯವರು ಅನುಗ್ರಹ ಭಾಷಣ ಮಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ವಿನುತಾರಾವ್ ಇವರು ವಂದನಾರ್ಪಣೆ ಮಾಡಿದರು.

ಪ್ರಥಮ ಸಂಭ್ರಮದ ಯಶಸ್ಸಿಗೆ ಕಾರಣರಾದ ಎಲ್ಲರಿಗೂ ಧನ್ಯವಾದವನ್ನು ತಿಳಿಸಲು ತಾ.21–01–2018ರಂದು ಶ್ರೀ ಕಲಾಸಂಗಮದ ಕಾರ್ಯಾಲಯದಲ್ಲಿ ಪೋಷಕರ ಸಭೆ ಕರೆಯಲಾಗಿತು ವಿದ್ಯಾರ್ಥಿಗಳು ಪೋಷಕರ ಸಮ್ಮುಖದಲ್ಲಿ ಟ್ರಸ್ಟ್‌ನ ಕೋಶಾಧಿಕಾರಿಯಾದ ಶ್ರೀ ಅರುಣಕುಮಾರ್ ಇವರು ಆಯವ್ಯಯಗಳ ವಿವರ ಮತ್ತು ಪ್ರಥಮ ಸಂಭ್ರಮದ ವರದಿ ಓದಿದರು. ಮಕ್ಕಳ ಮೇಳದ ರೂವಾರಿಯಾದ ಶ್ರೀ ಸುರೇಶ (ಪುಟ್ಟ) ಇವರ ಸಹಕಾರದಲ್ಲಿ ಮಕ್ಕಳ ಮೇಳಕ್ಕೆ ಒಂದು ಸಂಸ್ಥೆಯನ್ನು ರಚಿಸಲಾಯಿತು. ಅದರಂತೆ ಅಧ್ಯಕ್ಷರಾಗಿ ಶ್ರೀ ಎಸ್. ಪ್ರಕಾಶ್ ರಾವ್ ಅಲೆವೂರು, ಉಪಾಧ್ಯಕ್ಷರಾಗಿ ಶ್ರೀ ಕೆ. ಸುಭಾಸ್‌ರಾವ್, ಕಾರ್ಯದರ್ಶಿಯಾಗಿ ಶ್ರೀಮತಿ ಪ್ರಮೀಳಾ ರಾಮ್ ಶೆಟ್ಟಿಗಾರ್, ಜೊತೆ ಕಾರ್ಯದರ್ಶಿಯಾಗಿ ವಿನುತಾ ಎಸ್. ರಾವ್, ಕೋಶಾಧಿಕಾರಿಯಾಗಿ ಟಿ. ಶ್ರೀನಿವಾಸ್‌ರಾವ್ ದೇವಳಗುಜ್ಜಿ ಜೊತೆ ಕೋಶಾಧಿಕಾರಿಯಾಗಿ ಜೀವನ್ ಭಂಡಾರಿ ಸಲಹಾ ಸಮಿತಿಯಲ್ಲಿ ಅಶೋಕ್ ಆಚಾರ್ಯ ದೇವಳಗುಜ್ಜಿ, ಗಣಪತಿ ನಾಯಕ್, ಗಿರಿಧರ್, ಇಂದಿರಾನಗರ ಹಾಗೂ ವೇಷಭೂಷಣದ ಮೇಲ್ವಿಚಾರಣೆಯನ್ನು ಸಭೆಯಲ್ಲಿ ಭಾಗವಹಿಸಿದ ಆರು ಮಂದಿ ಸ್ತ್ರೀಯರಿಗೆ ವಹಿಸಲಾಯಿತು.

ಶ್ರೀ ಕಲಾಸಂಗಮ ಯಕ್ಷಗಾನ ಮಕ್ಕಳ ಮೇಳದ ಎಲ್ಲಾ ತರಬೇತಿಗಳು ಉಚಿತವಾಗಿದ್ದು ಸಹೃದಯಿ ಕಲಾಭಿಮಾನಿಗಳು ಯಾವುದೇ ರೀತಿಯ ಸಹಾಯವನ್ನು ನೀಡಬಹುದಾಗಿದೆ.

ಈ ಮಕ್ಕಳ ಮೇಳದ ರೂವಾರಿಯಾದ ನಮ್ಮವರೇ ಆದ ಶ್ರೀ ಸುರೇಶ್ ರಾವ್ ಕುಕ್ಕಿಕಟ್ಟೆ ಅಭಿನಂದನಾರ್ಹರಾಗಿದ್ದಾರೆ. ಪ್ರಥಮ ವರ್ಷವನ್ನು ಪೂರೈಸಿದ ಶ್ರೀ ಕಲಾ ಸಂಗಮ ಯಕ್ಷಗಾನ ಮೇಳವು ಉತ್ತರೋತ್ತರ ಅಭಿವೃದ್ಧಿಯನ್ನು ಕಾಣಲಿ ಎಂದು ಹಾರೈಸುತ್ತೇವೆ.


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**



ಕಾರ್ಯಕಾರಿಣಿ ಮಂಡಳಿ ಸದಸ್ಯರು

**D. K. District Used Vehicle Dealers & Agents Association (R.), Mangalore**

Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003

Mob. : 9845644489, 9964236997 E-mail : laxmiprasad5010@gmail.com

*With Best Complimemts From*

SRI M. SHAILESH RAO
B.E., Civil
Ph : 9448624324

Civil Engineer & Contractor

**SRI MALAVIKA ASSOCIATES**

KALSANKA-UDUPI ROAD, UDUPI.

Website : shreemaalavikaassociates.com

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

SAMPATH KUMAR Mobile : 9741508881

**TRISHULINI TOURIST**

*The Tourist People*

Near Mahishamardhini Temple, Bailur, Udupi.


ALL TYPES OF VEHICLES AVAILABLE FOR HIRE

## ಶ್ರೀ ಕಲಾ ಸಂಗಮ ಯಕ್ಷಗಾನ ಮಕ್ಕಳ ಮೇಳ ಮುಚ್ಲುಕೋಡು ಕುಕ್ಕಿಕಟ್ಟೆ ಇದರ “ಪ್ರಥಮ ಸಂಭ್ರಮ”ದ ಭಾವಚಿತ್ರಗಳು







## ತಾ.21-01-2018ರಂದು ಶ್ರೀಶಾರದಾ ಮಂಟಪದಲ್ಲಿ ಜರಗಿದ ಕ್ರೀಡಾಕೂಟದ ಭಾವಚಿತ್ರಗಳು











# ಸ್ಥಾನಿಕ ಬ್ರಾಹ್ಮಣ ಬಾಂಧವರಿಂದ ಧರ್ಮಸ್ಥಳ ಧರ್ಮಾಧಿಕಾರಿ ಹೆಗ್ಗಡೆಯವರ ಭೇಟಿ–ಗೌರವಾರ್ಪಣೆ





ಕಳೆದ ದಿನಾಂಕ 27ನೇ ಶನಿವಾರ ಸಂಜೆ 6 ಗಂಟೆಗೆ ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿಯ ಆರಾಧಕ **ಪೂಜ್ಯ ಪದ್ಮವಿಭೂಷಣ ಡಾ. ಡಿ. ವೀರೇಂದ್ರ ಹೆಗ್ಗಡೆ**ಯವರ 50ನೇ ಪಟ್ಟಬಂಧ ಮಹೋತ್ಸವದ ಶುಭವಸರದ ನಿಮಿತ್ತ ನಮ್ಮ ಸ್ಥಾನಿಕ ಸಮಾಜ ಬಾಂಧವರು ಅಭಿನಂದಿಸಿ, ಸ್ಥಾನಿಕ ಸಮಾಜದ ಎಲ್ಲಾ ಸಂಘ ಸಂಸ್ಥೆಗಳು ಹಾಗೂ ನಮ್ಮ ಆಡಳಿತದ 8 ದೇವಸ್ಥಾನಗಳಿಂದ ಹೆಗ್ಗಡೆಯವರ ಹೆಸರಿನಲ್ಲಿ ಪೂಜೆ ನೆರವೇರಿಸಿ ಪ್ರಸಾದವನ್ನು ನೀಡಿ ಸಂಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದ ಆಯೋಜನೆಯನ್ನು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಬೆಳ್ತಂಗಡಿಯವರು ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ) ಮಂಗಳೂರು ಇದರ ಸಹಯೋಗದೊಂದಿಗೆ ಮಂಗಳೂರು, ಉಡುಪಿ, ಪುತ್ತೂರು, ಕಾಸರಗೋಡು, ಬೆಳ್ತಂಗಡಿ, ಮೂಡಬಿದಿರೆ, ಕಾರ್ಕಳ, ಪುತ್ತೂರು, ಸುರತ್ಕಲ್, ಕುಂದಾಪುರ, ಪಡುಬಿದ್ರೆ, ಮೈಸೂರಿನ ನಮ್ಮ ಸಂಘಗಳ ಸದಸ್ಯರು ಹಾಗೂ ನಮ್ಮ ಸಮಾಜದ ದೇವಸ್ಥಾನಗಳಾದ ಮಠದಬೆಟ್ಟು ರಾಜರಾಜೇಶ್ವರೀ ದೇವಸ್ಥಾನ ಪುತ್ತೂರು, ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು ಪಡುಬಿದ್ರೆ, ಸದಾಶಿವ ದೇವಸ್ಥಾನ ಕೂಡಬೆಟ್ಟು ಬೆಳ್ತಂಗಡಿ, ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಶಾಲಿಪುರ ಕೊಕ್ರಾಡಿ, ಬೆಳ್ತಂಗಡಿ ತಾಲೂಕು, ಚೆಂಡುಕುಳ ಶ್ರೀ ಸೋಮನಾಥೇಶ್ವರ ದೇವಸ್ಥಾನ ಉಪ್ಪಳ ಚೆರುಗುಳಿ, ಶ್ರೀ ತ್ರಿಶೂಲಿನಿ ಮತ್ತು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಬಳ್ಪ ಸುಳ್ಯ, ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ ಪಡುಬಿದ್ರೆ, ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ ಕೋರಿಕೆಬೆಟ್ಟು ಮುಂಡ್ಕೂರು ಕಾರ್ಕಳರವರೊಂದಿಗೆ ನಡೆಸಿಕೊಟ್ಟರು.

ಧರ್ಮಸ್ಥಳದ ವಸಂತ ಮಹಲ್‌ನಲ್ಲಿ ಜರಗಿದ ಈ ಕಾರ್ಯಕ್ರಮದಲ್ಲಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರೀಯವರ ತಂಡದಿಂದ ವೇದಘೋಷ ಮೂಲಕ ಹೆಗ್ಗಡೆ ದಂಪತಿಗಳನ್ನು ಸ್ವಾಗತಿಸಲಾಯಿತು. ನಂತರ ನಮ್ಮ ಸಮಾಜ ಭಾಂದವರನ್ನು ಉದ್ದೇಶಿಸಿ ಪೂಜ್ಯ ಹೆಗ್ಗಡೆಯವರು ಮಾತಾಡುತ **"ನಮ್ಮಲ್ಲಿ ಮೊದಲಿನಿಂದಲೂ ಕರ್ತವ್ಯ ನಿಷ್ಠೆಗೆ ಮತ್ತು ವಿಶ್ವಾಸಕ್ಕೆ ಪಾತ್ರರಾದವರು ಸ್ಥಾನಿಕ ಬ್ರಾಹ್ಮಣರು, ನಮ್ಮ ಕ್ಷೇತ್ರದಲ್ಲೂ ಎರಡನೇ ಸ್ಥಾನದಲ್ಲಿರುವ ದೇಲಂಪಾಡಿತ್ತಯರು ಕೂಡ ನಿಮ್ಮವರೇ. ನೀವು ಪ್ರೀತಿಯನ್ನು ತೋರಿದ ಈ ರೀತಿ ನನಗೆ ಹಾಗೂ ನನ್ನ ಶ್ರೀಮತಿಯವರಿಗೆ ಬಹಳ ಸಂತೋಷವನ್ನು ಕೊಟ್ಟಿದೆ. ನಿಮ್ಮೆಲ್ಲಾ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸಿ ನನಗೆ ಪ್ರಸಾದ ನೀಡಿ ನಿಮ್ಮ ಸಜ್ಜನಿಕೆಯನ್ನು ಮೆರೆದಿರಿ. ಕೇವಲ ಮುಖಭಾವ ಮತ್ತು ಕಣ್ಣೋಟದಿಂದ ವ್ಯಕ್ತವಾಗುವ ಗೌರವ ಅಭಿಮಾನಗಳು ಮನತುಂಬಿ ಬರುತ್ತದೆ, ನಿಮ್ಮ ಸಮಾಜದ ಸೇವೆ ಪ್ರಶಂಸನೀಯ, ಕಠಿಣ ಪರಿಶ್ರಮದಿಂದ ಎಲ್ಲ ರಂಗದಲ್ಲೂ ಗುರುತಿಸಿಕೊಂಡವರು, ಮನೆಯಲ್ಲಿ ವೈಧಿಕ ಸಂಸ್ಕಾರಗಳಿರುವ ಕಾರಣ ಈ ಬ್ರಾಹ್ಮಣ ಸಮಾಜ ಗುರುತಿಸಲ್ಪಟ್ಟಿದೆ. ಸಮಾಜ ಒಂದಾಗಿ ಈ ರೀತಿಯಾಗಿ ನಾನಿದ್ದಲ್ಲಿಗೆ ಬಂದು ಗೌರವಿಸಿದ ಬಗೆ ಬಹಳ ಆಪ್ಯಾಯಮಾನವಾದದ್ದು, ಮುಂದಕ್ಕೂ ನಿಮ್ಮ ಸಮಾಜಕ್ಕೆ ನಮ್ಮ ಕ್ಷೇತ್ರಸ್ವಾಮಿಯ ಅನುಗ್ರಹ ನಮ್ಮ ಪ್ರೋತ್ಸಾಹ ಕೊಡುಗೆ ನಿರಂತರವಾಗಿ ಇದ್ದೇ ಇದೆ"** ಎಂದು ಶುಭ ಹಾರೈಸಿದರು.

ನಂತರ ಎಲ್ಲಾ ಸಂಘದವರು ಶ್ರೀ ಹೆಗ್ಗಡೆಯವರಿಗೆ ಗೌರವಾರ್ಪಣೆಯನ್ನು ಸಲ್ಲಿಸಿದರು. ಬೆಳ್ತಂಗಡಿ ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ. ಧನಂಜಯ ರಾವ್ ಪ್ರಸ್ತಾವನೆ ಮಾಡಿದರು. ಗೌರವ ಸಂಮಾನ ಪತ್ರವನ್ನು ಶ್ರೀ ಎಮ್.ದೇವಾನಂದ ಭಟ್ ವಾಚಿಸಿದರು. ಸನ್ಮಾನ ಪತ್ರವನ್ನು ಶ್ರೀ ಎನ್.ಕೆ.ಜಗನ್ನಿವಾಸ ರಾವ್ ಹಾಗೂ ಎಲ್ಲಾ ಗಣ್ಯರು ಸೇರಿ ಹೆಗ್ಗಡೆ ದಂಪತಿಗಳಿಗೆ ಸಮರ್ಪಿಸಿದರು. ನಂತರ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮ ಸಮಾಪನಗೊಂಡಿತು.

**ವರದಿ : ಎಮ್. ದೇವಾನಂದ ಭಟ್**

## "ಹಿರಿಯರೆಡೆಗೆ ನಮ್ಮ ನಡೆ"



ಸ್ಥಾನಿಕ ದ್ರಾವಿಡ ಬ್ರಾಹ್ಮಣ ಮಿತ್ರ ವೃಂದ ಉಡುಪಿಯು ಅಗಸ್ಟ್ 15 ಮತ್ತು ಜನವರಿ 26 ಈ ಎರಡು ದಿನಗಳಲ್ಲಿ ನಮ್ಮ ಸಮಾಜದ ಹಿರಿಯರನ್ನು ಗೌರವಿಸಿ ಅವರಿಂದ ಆಶೀರ್ವಾದವನ್ನು ಪಡೆಯುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾ ಬಂದಿದ್ದೇವೆ. ಈ ಬಾರಿ ನಮ್ಮ ನಡೆ ಹಿರಿಯ ಯಕ್ಷಗಾನ ಕಲಾವಿದ ಜಂಬೂರು ಶ್ರೀ ರಾಮಚಂದ್ರ ಶ್ಯಾನುಭಾಗ್ ಮತ್ತು ಹಿರಿಯಡ್ಕ ಶ್ರೀ ದಿವಾಕರ ಶಾಸ್ತ್ರಿ ಅವರೆಡೆಗೆ.

ಜಂಬೂರು ಶ್ರೀ ರಾಮಚಂದ್ರ ಶ್ಯಾನುಭಾಗ್ ಇವರು ಬಡಗುತಿಟ್ಟಿನ ಪ್ರಸಿದ್ಧ ಪುರುಷವೇಷಧಾರಿ. ಮಂದಾರ್ತಿ, ಇಡಗುಂಜಿ, ಗುಂಡುಬಾಳ ಮುಂತಾದ ಮೇಳಗಳಲ್ಲಿ ವೇಷ ಕಟ್ಟಿ ಕುಣಿದವರು. ಅವರ ಸುಧನ್ವ, ಅರ್ಜುನ, ಕೃಷ್ಣ, ದೇವೇಂದ್ರ ಮೊದಲಾದ ಪಾತ್ರಗಳು ಪ್ರಸಿದ್ಧವಾದವು. ಅವರ ಸುಧೀರ್ಘ ಯಕ್ಷಗಾನ ಸೇವೆಗಾಗಿ ಅವರಿಗೆ ಸಂದ ಪ್ರಶಸ್ತಿಗಳು ನೂರಾರು ಇದೀಗ ಯಕ್ಷಗಾನದಿಂದ ನಿವೃತ್ತರಾಗಿ ಮಕ್ಕಳ ಜೊತೆ ಸ್ವಾಬರಕಟ್ಟೆಯ ಸಮೀಪದ ಜಂಬೂರಿನಲ್ಲಿ ವಿಶ್ರಾಂತ ಜೀವನ ನಡೆಸುತ್ತಿರುವರು. ನಮ್ಮ ತಂಡವು ಮೊದಲಿಗೆ ಅವರ ಮನೆಗೆ ತೆರಳಿ, ಅವರಿಗೆ ಶಾಲು ಹೊದಿಸಿ, ಪೇಟಾ ತೊಡಿಸಿ, ಸ್ಮರಣಿಕೆ ನೀಡಿ ಗೌರವಿಸಿ ಆಶೀರ್ವಾದವನ್ನು ಪಡೆದುಕೊಂಡೆವು. ಅವರ ಧರ್ಮಪತ್ನಿಯವರನ್ನು ಸೀರೆ ನೀಡಿ ಗೌರವಿಸಿದೆವು. ಅವರ ಆತಿಥ್ಯವನ್ನು ಸ್ವೀಕರಿಸಿ ಅಲ್ಲಿಂದ ಧನ್ಯತಾಭಾವದಿಂದ ಮರಳಿದೆವು. ಗ್ರಾಮೀಣ ಪ್ರದೇಶದಲ್ಲಿರುವ ಅವರ ಮನೆಗೆ ನಾವು ತೆರಳಿ ಗೌರವಿಸಿದ ಪರಿಯನ್ನು ಕಂಡು ಅವರೆಲ್ಲ ಸಂತೋಷಪಟ್ಟು ನಮ್ಮನ್ನು ಬೀಳ್ಕೊಂಡರು.

ಅಲ್ಲಿಂದ ನಾವು ಹಿರಿಯಡ್ಕ ಶ್ರೀ ದಿವಾಕರ ಶಾಸ್ತ್ರಿಯವರಲ್ಲಿಗೆ ತೆರಳಿದೆವು. ಶ್ರೀಯುತ ದಿವಾಕರ ಶಾಸ್ತ್ರಿಯವರು ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿ ಈಗ ಹಿರಿಯಡ್ಕ ಆಳುಗ್ಗೇಲಿನ ಹಿರಿಯ ಮನೆಯಲ್ಲಿ ಮಗನೊಂದಿಗೆ ವಾಸವಾಗಿರುವರು. ಸ್ವತಃ ಕೃಷಿಕರಾಗಿರುವ ಅವರು ಹಿರಿಯಡ್ಕ ದೇವಸ್ಥಾನದಲ್ಲಿ ಜರಗುವ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರೀಯರಾಗಿದ್ದು ಸಲಹೆ ಸೂಚನೆ ನೀಡುತ್ತಾ ಜನಾನುರಾಗಿರುವರು. ಸನ್ಮಾನಗಳಿಂದ ಬಲು ದೂರ ಇರುವ ಅವರು ನಮ್ಮ ಪ್ರೀತಿಗೆ ಮಣಿದು ನಮ್ಮ ಗೌರವವನ್ನು ಸ್ವೀಕರಿಸಿದರು. ಅವರನ್ನು ಶಾಲು ಹೊದಿಸಿ, ಪೇಟಾ ತೊಡಿಸಿ, ಸ್ಮರಣಿಕೆ ನೀಡಿ ಗೌರವಿಸಿ ಅವರ ಆಶೀರ್ವಾದವನ್ನೂ ಪಡೆದೆವು. ಅವರ ಪುತ್ರ ಶ್ರೀ ದೇವದಾಸ್ ರಾವ್ ಮತ್ತು ಧರ್ಮಪತ್ನಿ ಹಾಗೂ ಮಕ್ಕಳು ನಮ್ಮನ್ನು ಸತ್ಕರಿಸಿ ಕೃತಜ್ಞತೆಯನ್ನು ಸೂಚಿಸಿದರು. ಅರ್ಹರಾದ ಇವರನ್ನು ಗೌರವಿಸಿ ಆಶೀರ್ವಾದವನ್ನು ಪಡೆದು ಧನ್ಯತಾಭಾವದೊಂದಿಗೆ ಮುಂದಕ್ಕೆ ಹಿರಿಯರೆಡೆಗೆ ನಮ್ಮ ನಡೆ ಸತತವಾಗಿ ನಡೆಯಲಿ ಎಂಬ ಆಶಯದೊಡನೆ ನಾವೆಲ್ಲ ಮರಳಿ ಮನೆ ಸೇರಿದೆವು.

**– ಹೆರ್ಗ ನಿರಂಜನ ರಾವ್**

With Best Compliments From :




Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org